13. ಮುದ್ರಣ ಕಾಗದ ಖರೀದಿ ಬಿಲ್ಲು ಹಾಗೂ ಸರಬರಾಜು ಮಾಡಿದ ಪತ್ರ ನೀಡಬೇಕು.

ಟಿಪ್ಪಣಿ: ಜಿಲ್ಲಾ ಮಾಧ್ಯಮ ಸಮಿತಿಯ ವರದಿಯನ್ನಾಧರಿಸಿ ಜಿಲ್ಲಾ ಮಟ್ಟದ ಪತ್ರಿಕೆಗಳು ಮತ್ತು ನಿಯತಕಾಲಿಕಗಳನ್ನು ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಗೆ ಸೇರ್ಪಡೆ ಮಾಡಿ ನಿಯಮಾನುಸಾರ ಜಾಹೀರಾತು ದರ ನಿಗದಿಪಡಿಸುವ ಅಧಿಕಾರವನ್ನು ವಾರ್ತಾ ಇಲಾಖೆಯ ನಿರ್ದೇಶಕರು ಹೊಂದಿರುತ್ತಾರೆ.

2) ಪ್ರಾದೇಶಿಕ ದಿನ ಪತ್ರಿಕೆಗಳು:

ಪ್ರಾದೇಶಿಕ ದಿನ ಪತ್ರಿಕೆಗಳು ಎಂದು ಪರಿಗಣಿತವಾಗಬೇಕಾದರೆ ಪತ್ರಿಕೆಯು ಮುದ್ರಣಗೊಂಡು ಪ್ರಕಟವಾಗುತ್ತಿರುವ ಮೂಲ ಜಿಲ್ಲೆಯಲ್ಲಿ ಪ್ರತಿ ಸಂಚಿಕೆ ಕನಿಷ್ಠ 5000 ಪ್ರತಿಗಳ ಪ್ರಸಾರ ಸಂಖ್ಯೆ ಹೊಂದಿರಬೇಕು. ಅಕ್ಕಪಕ್ಕದ ಇತರೆ ಮೂರು ಜಿಲ್ಲೆಗಳಲ್ಲಿ ತಲಾ 1000 ಪ್ರತಿಗಳ ಪ್ರಸಾರ ಸಂಖ್ಯೆ ಹೊಂದಿರಬೇಕು. ಆ ಜಿಲ್ಲೆಗಳಲ್ಲಿ ಕನಿಷ್ಠ 6 ತಿಂಗಳು ಪ್ರಸಾರ ಹೊಂದಿರಬೇಕು. ಒಟ್ಟಾರೆ ಕನಿಷ್ಠ 8000 ಪ್ರತಿಗಳ ಪ್ರಸಾರವಿರಬೇಕು. ಪತ್ರಿಕೆಯು ಪ್ರಸಾರ ಹೊಂದಿರುವುದಕ್ಕೆ ಆಧಾರವಾಗಿ ಕೆಳಕಂಡ ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ವಾರ್ತಾ ಇಲಾಖೆಯ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

1. ಜಿಲ್ಲೆಯಲ್ಲಿ ಮಾರಾಟವಾಗುತ್ತಿರುವ ವಿಧಾನ ಮತ್ತು ಅದಕ್ಕೆ ಪೂರಕ ದಾಖಲೆಗಳು (ಮಾರಾಟ ಏಜೆಂಟ್‌ರ ಪಟ್ಟಿ, ಮಾರಾಟ ಏಜೆಂಟರಿಂದ ಹಣ ಸ್ವೀಕೃತಿ ರಸೀತಿ, ಚಂದಾದಾರರ ಪಟ್ಟಿ, ಪತ್ರಿಕೆ ಸಾಗಾಟದ ದಾಖಲೆ)
2. ಮೂಲ ಜಿಲ್ಲೆಯು ಸೇರಿದಂತೆ ಪ್ರಸಾರವಿರುವ ಎಲ್ಲಾ ಜಿಲ್ಲೆಗಳ ಪ್ರಸಾರ ಸಂಖ್ಯೆಗೆ ಅಗತ್ಯವಿರುವ ಮುದ್ರಣ ಕಾಗದ ಖರೀದಿ ಬಿಲ್ಲು.
3. ಸ್ವಂತ ಮುದ್ರಣಯಂತ್ರ ಹೊಂದಿದಲ್ಲಿ ನೋಂದಣಿ/ನವೀಕರಿಸಿದ ಬಗ್ಗೆ ದಾಖಲೆ, ಮಾಸಿಕ ವಿದ್ಯುಚ್ಛಕ್ತಿ ಬಿಲ್ಲು. ಬಾಡಿಗೆ ಮುದ್ರಣ ಯಂತ್ರದಲ್ಲಿ ಮುದ್ರಿಸುತ್ತಿದ್ದಲ್ಲಿ ಮುದ್ರಕರಿಗೆ ಸಂದಾಯ ಮಾಡಿದ ಹಣ ಸಂದಾಯ ರಸೀದಿ.
4. ಪತ್ರಿಕಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ವಿವರ ಹಾಗೂ ಅವರಿಗೆ ಪಾವತಿ ಮಾಡಿರುವ ಭವಿಷ್ಯನಿಧಿ (ಪಿ.ಎಫ್) ವಿವರ.

ಟಿಪ್ಪಣಿ:

ವಾರ್ತಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ವರದಿ ಪಡೆದು ಪ್ರಾದೇಶಿಕ ಪತ್ರಿಕೆ ಎಂದು ಪರಿಗಣಿಸಿ ನಿಯಮಾನುಸಾರ ಜಾಹೀರಾತು ದರ ನಿಗದಿಪಡಿಸುವ ಅಧಿಕಾರವನ್ನು ವಾರ್ತಾ ಇಲಾಖೆಯ ನಿರ್ದೇಶಕರು ಹೊಂದಿರುತ್ತಾರೆ.

ಷರಾ:

1) ಪ್ರಾದೇಶಿಕ ದಿನ ಪತ್ರಿಕೆಗಳ ಗರಿಷ್ಠ ಪ್ರಸಾರ ವ್ಯಾಪ್ತಿ ಅಕ್ಕಪಕ್ಕದ 8 ಜಿಲ್ಲೆಗಳಿಗೆ ಸೀಮಿತವಾಗಿರತಕ್ಕದ್ದು.
2) ಪ್ರಾದೇಶಿಕ ದಿನ ಪತ್ರಿಕೆಗಳು ತಮ್ಮ ಪ್ರಸಾರ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕನಿಷ್ಠ
3) ಶೇ 50 ರಷ್ಟು ಸುದ್ದಿ ಪ್ರಕಟಿಸುತ್ತಿರಬೇಕು.

3) ರಾಜ್ಯಮಟ್ಟದ ದಿನ ಪತ್ರಿಕೆಗಳು:

1. ಪ್ರತಿ ಸಂಚಿಕೆಯು ಕನಿಷ್ಟ 75,000 ಪ್ರತಿಗಳ ಪ್ರಸಾರ ಹೊಂದಿರಬೇಕು.
2. ರಾಜ್ಯವ್ಯಾಪ್ತಿ ಪ್ರಸಾರ ಹೊಂದಿರಬೇಕು.
3. ಎ.ಬಿ.ಸಿ. ವರದಿಯ ಪ್ರತಿ ಸಲ್ಲಿಸಬೇಕು.

ಟಿಪ್ಪಣಿ:

ಮೇಲ್ಕಂಡಂತೆ ದಾಖಲೆಗಳನ್ನು ಪರಿಶೀಲಿಸಿ, ಪತ್ರಿಕೆಗಳನ್ನು ರಾಜ್ಯಮಟ್ಟದ ಪತ್ರಿಕೆ ಎಂದು ಪರಿಗಣಿಸಿ ನಿಯಮಾನುಸಾರ ಜಾಹೀರಾತು ದರ ನಿಗದಿಪಡಿಸುವ ಅಧಿಕಾರವನ್ನು ವಾರ್ತಾ ಇಲಾಖೆಯ ನಿರ್ದೇಶಕರು ಹೊಂದಿರುತ್ತಾರೆ.

4) <u>ಪತ್ರಿಕೆಗಳನ್ನು ಮಾಧ್ಯಮ ಪಟ್ಟಿಯಿಂದ ಕೈಬಿಡಲು ಅನುಸರಿಸಬೇಕಾದ ವಿಧಾನ:</u>

1. ಅಂಗೀಕೃತ ಮಾಧ್ಯಮ ಪಟ್ಟಿಗೆ ಸೇರಿರುವ ದಿನಪತ್ರಿಕೆಯು ಒಂದು ವರ್ಷದಲ್ಲಿ ಸತತವಾಗಿ 6 ವಾರಗಳ ಕಾಲ / ವಾರ ಪತ್ರಿಕೆಗಳಾದರೆ 6 ಸಂಚಿಕೆಗಳು / ಮಾಸ ಪತ್ರಿಕೆಗಳಾದರೆ 2 ಸಂಚಿಕೆಗಳು ಹಾಗೂ ಪಾಕ್ಷಿಕ ಪತ್ರಿಕೆಗಳಾದರೆ 3 ಸಂಚಿಕೆಗಳು ನಿಯಮಿತವಾಗಿ ಪ್ರಕಟಗೊಳ್ಳದಿದ್ದಲ್ಲಿ ಅಂತಹ ಪತ್ರಿಕೆಗಳ ಸಂಪಾದಕರಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಮಾಧ್ಯಮಪಟ್ಟಿಯಿಂದ ತೆಗೆದುಹಾಕುವ ಅಧಿಕಾರವನ್ನು ವಾರ್ತಾ ಇಲಾಖೆಯ ನಿರ್ದೇಶಕರು ಹೊಂದಿರುತ್ತಾರೆ.

2. ಪತ್ರಿಕೆಯನ್ನು ಮಾಧ್ಯಮ ಪಟ್ಟಿಯಿಂದ ಒಂದು ಬಾರಿ ತೆಗೆದು ಹಾಕಿದಾಗ ಅಂತಹ ಪತ್ರಿಕೆಯನ್ನು ಪುನ: ಮಾಧ್ಯಮ ಪಟ್ಟಿಗೆ ಸೇರಿಸಬೇಕಾದರೆ ತೆಗೆದು ಹಾಕಿದ ದಿನಾಂಕದಿಂದ ಒಂದು ವರ್ಷ ಕಳೆದ ನಂತರವಷ್ಟೇ ಪತ್ರಿಕೆಯ ಕ್ರಮಬದ್ಧ ಪ್ರಕಟಣೆ ಮತ್ತು ಪ್ರಸಾರ ಸಂಖ್ಯೆ ಬಗ್ಗೆ ಜಿಲ್ಲಾ ಮಾಧ್ಯಮ ಸಮಿತಿಯ ವರದಿಯನ್ನು ಆಧರಿಸಿ ವಾರ್ತಾ ಇಲಾಖೆಯ ನಿರ್ದೇಶಕರು ಮಾಧ್ಯಮಪಟ್ಟಿಗೆ ಸೇರಿಸಿ ನಿಯಮಾನುಸಾರ ದರ ನಿಗದಿಪಡಿಸಬಹುದು.

3. ಪತ್ರಿಕೆಗಳು ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿ ಮುಂದುವರಿಯಲು ಪ್ರತಿ ವರ್ಷ ಸೆಪ್ಟೆಂಬರ್ 30 ರ ಒಳಗಾಗಿ ಪತ್ರಿಕೆಯ ಹಿಂದಿನ ವಾರ್ಷಿಕ ಲೆಕ್ಕಪತ್ರ ವರದಿಯನ್ನು ವಾರ್ತಾ ಇಲಾಖೆಯ ನಿರ್ದೇಶನಾಲಯಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕು. ತಪ್ಪಿದಲ್ಲಿ ಮುನ್ಸೂಚನೆಯೊಂದಿಗೆ ಒಂದು ತಿಂಗಳ ಕಾಲಾವಕಾಶ ನೀಡಿ, ಈ ಅವಧಿಯಲ್ಲಿ ಪತ್ರಿಕೆಯವರಿಂದ ಸಕಾರಣವಾದ ವಿವರಣೆ ಬರದಿದ್ದಲ್ಲಿ ಪತ್ರಿಕೆಯನ್ನು ಮಾಧ್ಯಮ ಪಟ್ಟಿಯಿಂದ ತೆಗೆದು ಹಾಕಬೇಕು.

4. ಪತ್ರಿಕೆಯು ನಿರಂತರವಾಗಿ ಶೇ 40ಕ್ಕೂ ಹೆಚ್ಚು ಜಾಹೀರಾತು ಪ್ರಕಟಿಸುತ್ತಿದ್ದಲ್ಲಿ ಮತ್ತು ಮುದ್ರಣ ವಿಷಯ ಹಾಗೂ ಛಾಯಾಚಿತ್ರಗಳು ಸ್ಪಷ್ಟವಾಗಿ ಮೂಡದಿದ್ದಲ್ಲಿ ವಾರ್ತಾ ಇಲಾಖೆಯು ಬಿಡುಗಡೆ ಮಾಡುವ ಪ್ರಕಟಿತ ಜಾಹೀರಾತಿನ ಒಟ್ಟು ವೆಚ್ಚದಲ್ಲಿ ಗರಿಷ್ಟ ಶೇ. 50 ರವರೆಗೆ ವೆಚ್ಚವನ್ನು ಕಡತಗೊಳಿಸುವ ಅಧಿಕಾರವನ್ನು ವಾರ್ತಾ ಇಲಾಖೆಯ ನಿರ್ದೇಶಕರು ಹೊಂದಿರುತ್ತಾರೆ.

5. ದಿನ ಪತ್ರಿಕೆಗಳು ಮಾಹೆಯಾನ ಕನಿಷ್ಟ 25 ಸಂಚಿಕೆಗಳನ್ನು ಹಾಗೂ ವಾರ ಪತ್ರಿಕೆಗಳು ಕನಿಷ್ಟ 3 ಸಂಚಿಕೆಗಳನ್ನು ಕಡ್ಡಾಯವಾಗಿ ಹೊರತರಬೇಕು. ಪತ್ರಿಕೆಯ 6 ತಿಂಗಳ ಸರಾಸರಿ ಪ್ರಸಾರ ಸಂಖ್ಯೆ ಹಾಗೂ ಸಂಚಿಕೆಗಳ ಬಗ್ಗೆ ಪರಿಶೀಲಿಸಿ, ಒಂದು ವೇಳೆ ಕಡಿಮೆ ಸಂಚಿಕೆ ಅಥವಾ ಪ್ರಸಾರ ಸಂಖ್ಯೆ ಇರುವುದು ಕಂಡು ಬಂದಲ್ಲಿ ಅಂತಹ ಪತ್ರಿಕೆ/ನಿಯತಕಾಲಿಕೆಗಳನ್ನು ತಾತ್ಕಾಲಿಕವಾಗಿ ಮಾಧ್ಯಮ ಪಟ್ಟಿಯಿಂದ ಅಮಾನತ್ತಿನಲ್ಲಿಡುವ ಹಾಗೂ ಅಂತಹ ಪತ್ರಿಕೆಗಳು ಮುಂಬರುವ 6 ತಿಂಗಳಲ್ಲಿ ಕಂಡಿಕೆ 2 ರಲ್ಲಿ ತಿಳಿಸಿರುವಂತೆ ಕ್ರಮಬದ್ಧವಾಗಿ ಪ್ರಕಟವಾದಲ್ಲಿ ಪುನ: ಮಾಧ್ಯಮ ಪಟ್ಟಿಯಲ್ಲಿ ಮುಂದುವರೆಸುವ ಅಧಿಕಾರವನ್ನು ವಾರ್ತಾ ಇಲಾಖೆಯ ನಿರ್ದೇಶಕರು ಹೊಂದಿರುತ್ತಾರೆ.

6. ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಗಳು ವಾರ್ತಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಹಾಗೂ ವಾರ್ತಾ ಇಲಾಖೆಯ ನಿರ್ದೇಶನಾಲಯಕ್ಕೆ ಪತ್ರಿಕೆಯ ಪ್ರತಿ ಸಂಚಿಕೆಯ ಕನಿಷ್ಟ 2 ಗೌರವ ಪ್ರತಿಗಳನ್ನು (Complimentary copy) ಕಡ್ಡಾಯವಾಗಿ ಸರಬರಾಜು ಮಾಡಬೇಕು. ತಪ್ಪಿದಲ್ಲಿ ಅಂತಹ ಪತ್ರಿಕೆಯ ಸಂಪಾದಕರಿಗೆ ನೋಟಿಸ್ ಜಾರಿ ಮಾಡಿ ವಾರ್ತಾ ನಿರ್ದೇಶಕರು ಜಾಹೀರಾತು ತಡೆ ಹಿಡಿಯಲು ಸೂಕ್ತ ಕ್ರಮಕ್ಕೆಗೊಳ್ಳಬಹುದಾಗಿದೆ.

7. ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಯ ಮಾಲೀಕತ್ವ ಬದಲಾದಲ್ಲಿ, ನಿಯಮಾನುಸಾರ ಹೊಸದಾಗಿ ಡಿಕ್ಲರೇಷನ್ ಮಾಡಿಕೊಂಡು ಅದರ ಪ್ರತಿಯನ್ನು ಮತ್ತು ಡಿಕ್ಲರೇಷನ್ ಮಾಡಿಕೊಂಡ ದಿನಾಂಕದಿಂದ ಗರಿಷ್ಠ 6 ತಿಂಗಳ ಒಳಗಾಗಿ ಪರಿಷ್ಕೃತ ಆರ್.ಎನ್.ಐ ಪ್ರಮಾಣಪತ್ರ ಪ್ರತಿಯನ್ನು ವಾರ್ತಾ ಇಲಾಖೆಯ ನಿರ್ದೇಶನಾಲಯಕ್ಕೆ ಸಲ್ಲಿಸದಿದ್ದಲ್ಲಿ ಅಂತಹ ಪತ್ರಿಕೆಗಳನ್ನು ಮಾಧ್ಯಮ ಪಟ್ಟಿಯಿಂದ ಕೈಬಿಡತಕ್ಕದ್ದು.

13) **ಹೊಸದಾಗಿ ಘೋಷಣಾ ಪತ್ರ ಸಲ್ಲಿಕೆ:**

ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಗಳು ಕೆಳಕಂಡ ಸಂದರ್ಭಗಳಲ್ಲಿ ಹೊಸದಾಗಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರ ಮುಂದೆ ಅವರ ಘೋಷಣಾ ಪತ್ರ ಸಲ್ಲಿಸಿ ಸಹಿ ಪಡೆದುಕೊಳ್ಳಬೇಕು ಮತ್ತು ಅದರ ದೃಢೀಕೃತ ಪ್ರತಿಯನ್ನು ವಾರ್ತಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ವಾರ್ತಾ ಇಲಾಖೆಯ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

1) ಪತ್ರಿಕೆಯ ಮಾಲೀಕತ್ವ ಬದಲಾವಣೆಯಾದಲ್ಲಿ.
2) ಪತ್ರಿಕೆಯ ಹೆಸರು ಅಥವಾ ಭಾಷೆ ಅಥವಾ ಅದರ ಪ್ರಕಟಣಾ ನಿಯತಕಾಲಿಕ ಅವಧಿ ಬದಲಾವಣೆಯಾದಲ್ಲಿ.

ಷರಾ:

1) ಮೇಲ್ಕಂಡಂತೆ ಪತ್ರಿಕೆಗಳ ವಿವರಗಳಲ್ಲಿ ಉಂಟಾದ ಬದಲಾವಣೆಗಳ ಕುರಿತು ಬದಲಾವಣೆಯಾದ ಒಂದು ತಿಂಗಳೊಳಗಾಗಿ ಹೊಸ ಘೋಷಣಾ ಪತ್ರವನ್ನು ವಾರ್ತಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮತ್ತು ನಿರ್ದೇಶಕರಿಗೆ ಸಲ್ಲಿಸದಿದ್ದಲ್ಲಿ ಅಂತಹ ಪತ್ರಿಕೆಯನ್ನು ಇಲಾಖೆಯ ಮಾಧ್ಯಮ ಪಟ್ಟಿಯಿಂದ ಅಮಾನತ್ತಿನಲ್ಲಿಡಬಹುದಾಗಿದೆ.

2) ಪತ್ರಿಕೆ ನಿಯತಕಾಲಿಕ ಅವಧಿ (ಜಔಡಿಜಿಚಿಜಿಣಥಿ)) ಯನ್ನು ಉನ್ನತೀಕರಿಸಿಕೊಂಡಲ್ಲಿ ಅಂದರೆ ವಾರ ಪತ್ರಿಕೆಯಾಗಿದ್ದು, ದಿನ ಪತ್ರಿಕೆಯಾದಲ್ಲಿ, ಪಾಕ್ಷಿಕ ಪತ್ರಿಕೆಯಾಗಿದ್ದು ವಾರ ಪತ್ರಿಕೆಯಾದಲ್ಲಿ, ಮಾಸಿಕವಾಗಿದ್ದು, ಪಾಕ್ಷಿಕ ಅಥವಾ ವಾರ ಅಥವಾ ದಿನ ಪತ್ರಿಕೆಯಾಗಿ ಬದಲಾವಣೆಗೊಂಡಲ್ಲಿ ಅಂತಹ ಪತ್ರಿಕೆಗಳನ್ನು ಬದಲಾವಣೆಗೊಂಡ 3 ತಿಂಗಳ ಕಾಲದವರೆಗೆ ಇಲಾಖೆಯ ಮೂಲ ಮಾಧ್ಯಮ ಪಟ್ಟಿಯಲ್ಲಿ ಮುಂದುವರೆಸಿ ಮೂಲ ಜಾಹೀರಾತು ದರ ಅನ್ವಯಿಸಿ ಜಾಹೀರಾತು ಸೌಲಭ್ಯ ನೀಡಬೇಕು.

3) ನಿಗದಿತ ಮೂರು ತಿಂಗಳ ಅವಧಿಯಲ್ಲಿ ಪತ್ರಿಕೆಯು ಬದಲಾವಣೆಗೊಂಡ ನಿಯತಕಾಲಿಕ ಅವಧಿಗೆ ಅನ್ವಯಿಸಿ ಹೊಸದಾಗಿ ಆರ್.ಎನ್.ಐ ಪ್ರಮಾಣಪತ್ರದೊಂದಿಗೆ ಹೊಸ ಮಾಧ್ಯಮ ಪಟ್ಟಿಗೆ ಸೇರಿಸಲು ಅಗತ್ಯವಿರುವ ಪ್ರಸಾರ ಸಂಖ್ಯೆ ಮತ್ತು ಕ್ರಮಬದ್ಧ ಪ್ರಕಟಣೆಗೆ ಸಂಬಂಧಿಸಿದಂತೆ ಅಗತ್ಯ ದಾಖಲೆಗಳನ್ನು ವಾರ್ತಾ ಇಲಾಖೆಯ ನಿರ್ದೇಶನಾಲಯಕ್ಕೆ ಸಲ್ಲಿಸದಿದ್ದಲ್ಲಿ ಅಂತಹ ಪತ್ರಿಕೆಗಳನ್ನು ಇಲಾಖೆಯ ಮೂಲ ಮಾಧ್ಯಮ ಪಟ್ಟಿಯಿಂದ ಅಮಾನತ್ತಿನಲ್ಲಿಟ್ಟು ಜಾಹೀರಾತು ಸೌಲಭ್ಯವನ್ನು ಸ್ಥಗಿತಗೊಳಿಸಬೇಕು.

4) ಒಂದು ವೇಳೆ ಪತ್ರಿಕೆಯ ನಿಯತಕಾಲಿಕ ಅವಧಿ (Periodicity) ಯನ್ನು ಕಡಿತಗೊಳಿಸಿದಲ್ಲಿ ಅಂದರೆ ದಿನ ಪತ್ರಿಕೆಯನ್ನು ವಾರಪತ್ರಿಕೆಯಾಗಿ ಅಥವಾ ಪಾಕ್ಷಿಕ ಪತ್ರಿಕೆಯಾಗಿ ಅಥವಾ ಮಾಸ ಪತ್ರಿಕೆಯಾಗಿ ಬದಲಾವಣೆ ಮಾಡಿದ್ದಲ್ಲಿ ಅಂತಹ ಪತ್ರಿಕೆಗಳನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಇಲಾಖೆಯ ಮಾಧ್ಯಮ ಪಟ್ಟಿಯಿಂದ ತೆಗೆದುಹಾಕಲು ವಾರ್ತಾ ಇಲಾಖೆಯ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.

14) ಜಾಹೀರಾತು ದರ ನಿಗದಿ

1) ಪತ್ರಿಕಾ ಮಾಧ್ಯಮ : ಮಾಧ್ಯಮಪಟ್ಟಿಯಲ್ಲಿರುವ ಮತ್ತು ಮಾಧ್ಯಮಪಟ್ಟಿಗೆ ಸೇರುವ ಪತ್ರಿಕೆಗಳಿಗೆ ಅವುಗಳ ಪ್ರಸಾರ ಸಂಖ್ಯೆ ಆಕಾರ ಮತ್ತು ಆವೃತ್ತಿಗನುಗುಣವಾಗಿ ಕೆಳಕಂಡಂತೆ ಪ್ರತಿ ಚ.ಸೆಂ.ಮೀಗೆ ಜಾಹೀರಾತು ದರ ನಿಗದಿಪಡಿಸಬೇಕು.

ಕ್ರ. ಸಂ	ಪತ್ರಿಕೆಗಳ ವರ್ಗೀಕರಣ	ಆಕಾರ (ಕನಿಷ್ಠ ಮುದ್ರಣ ವಿಸ್ತೀರ್ಣ)	ಪ್ರಸಾರ ಸಂಖ್ಯೆ (ಕನಿಷ್ಠ ಪ್ರತಿಗಳು)	ಪ್ರತಿ ಚ.ಸೆಂ.ಮೀ.ಗೆ ಜಾಹೀರಾತು ದರ	ಕನಿಷ್ಠ ನಿಗದಿತ ಪ್ರಸಾರ ಸಂಖ್ಯೆಯ ದರ ನಿಗದಿ
1	ಜಿಲ್ಲಾಮಟ್ಟದ ದಿನಪತ್ರಿಕೆಗಳು	3200 ಚ.ಸೆಂ.ಮೀ ಮುದ್ರಣ ವಿಸ್ತೀರ್ಣ	1000 ದಿಂದ 3000 ದೊಳಗೆ ಪ್ರತಿಗಳು	ರೂ. 10-00	3001 ರಿಂದ 20,000 (ಪ್ರತಿ ಸಾವಿರ ಹೆಚ್ಚಳಕ್ಕೆ ಪ್ರತಿ ಚ.ಸೆಂ.ಮೀಗೆ 1/- ರೂ.)
2	ಜಿಲ್ಲಾಮಟ್ಟದ ದಿನಪತ್ರಿಕೆಗಳು	6400 ಚ.ಸೆಂ.ಮೀ ಮುದ್ರಣ ವಿಸ್ತೀರ್ಣ	1000 ದಿಂದ 5000 ದೊಳಗೆ ಪ್ರತಿಗಳು	ರೂ. 16-00	5001 ರಿಂದ 20,000 (ಪ್ರತಿ ಸಾವಿರ ಹೆಚ್ಚಳಕ್ಕೆ ಪ್ರತಿ ಚ.ಸೆಂ.ಮೀಗೆ 1/- ರೂ.)
3	ಪ್ರಾದೇಶಿಕ ದಿನಪತ್ರಿಕೆಗಳು	ಕನಿಷ್ಠ 9600 ಚ.ಸೆಂ.ಮೀ ಮುದ್ರಣ ವಿಸ್ತೀರ್ಣ	ಕನಿಷ್ಠ 8,000 ಪ್ರತಿಗಳು	ರೂ. 36-00	8,001 ರಿಂದ 50,000 ಪ್ರತಿ (ಪ್ರತಿ ಸಾವಿರ ಹೆಚ್ಚಳಕ್ಕೆ ಪ್ರತಿ ಚ.ಸೆಂ.ಮೀಗೆ 1/- ರೂ.)
4	ರಾಜ್ಯಮಟ್ಟದ ದಿನ ಪತ್ರಿಕೆಗಳು	ಕನಿಷ್ಠ 19,200 ಚ.ಸೆಂ.ಮೀ ಮುದ್ರಣ ವಿಸ್ತೀರ್ಣ	ಕನಿಷ್ಟ 75,000 ಸಾವಿರ ಪ್ರತಿಗಳಿಂದ	ರೂ. 75-00	75,001 ರ ನಂತರದ (ಪ್ರತಿ ಸಾವಿರ ಹೆಚ್ಚಳಕ್ಕೆ ಪ್ರತಿ ಚ.ಸೆಂ.ಮೀಗೆ 1/- ರೂ.)
5	ನಿಯತಕಾಲಿಕಗಳು	ಕ್ರ.ಸಂ 10 ರ 2 ರಿಂದ 6 ರವರೆಗೆ ತಿಳಿಸಿರುವಂತೆ	1000 ದಿಂದ 10000ದೊಳಗೆ ಪ್ರತಿಗಳು	ರೂ. 4-00	1) 10001 ರ ಮೇಲ್ಪಟ್ಟು ಪ್ರತಿ ಸಾವಿರ ಪ್ರತಿಗಳ ಹೆಚ್ಚಳಕ್ಕೆ ಪ್ರತಿ ಚ.ಸೆಂ. ಮೀ.ಗೆ 1/- ರೂ.

ಷರಾ:

1. ಜಿಲ್ಲಾಮಟ್ಟದ ದಿನ ಪತ್ರಿಕೆಗಳು/ನಿಯತಕಾಲಿಕಗಳ ಪ್ರಸಾರ ಸಂಖ್ಯೆಯು 3,000 ಪ್ರತಿಗಳನ್ನು ಮೀರಿದಾಗ ಮತ್ತು ಪ್ರಾದೇಶಿಕ ದಿನ ಪತ್ರಿಕೆಗಳ ಪ್ರಸಾರಸಂಖ್ಯೆ 8,000 ಪ್ರತಿಗಳನ್ನು ಮೀರಿದಾಗ 3 ತಿಂಗಳ ನಂತರ ಮೂಲ ಜಿಲ್ಲಾ ಮಟ್ಟದ ಮಾಧ್ಯಮ ಸಮಿತಿಯು ಕನಿಷ್ಠ 1000 ಪ್ರತಿಗಳಂತೆ ಪ್ರಸಾರ ಸಂಖ್ಯೆ ನಿಗದಿಪಡಿಸಲು ಗೊತ್ತುಪಡಿಸಿರುವ ಈ ಕೆಳಕಂಡ ದಾಖಲೆಗಳನ್ನು ಪರಿಶೀಲಿಸಿ ವರದಿ ನೀಡಿ ದೃಢೀಕರಿಸಬೇಕು.

    1) ಮುದ್ರಣ ಕಾಗದ ಖರೀದಿ ಬಿಲ್ಲು.
    2) ಮುದ್ರಕರೊಂದಿಗೆ ಮಾಡಿಕೊಂಡ ಕರಾರು ಒಪ್ಪಂದ
    3) ಮುದ್ರಕರಿಗೆ ಪಾವತಿ ಮಾಡಿದ ಮುದ್ರಣ ವೆಚ್ಚದ ಬಿಲ್ಲು.
    4) ಲೆಕ್ಕಪರಿಶೋಧಕರ ವಾರ್ಷಿಕ ವರದಿ.
    5) ಸ್ವಂತ ಮುದ್ರಣ ಯಂತ್ರ ಹೊಂದಿದ್ದಲ್ಲಿ ವಿದ್ಯುಚ್ಛಕ್ತಿ ಬಿಲ್ಲು
    6) ವೃತ್ತಿ/ಆದಾಯ ತೆರಿಗೆ ಪಾವತಿ ದಾಖಲೆಗಳು
    7) ಮಾರಾಟ ಏಜೆಂಟರ ಪಟ್ಟಿ ಮತ್ತು ಅವರಿಂದ ಪತ್ರಿಕೆ ಮಾರಾಟ ಮಾಡಿದ ಸ್ವೀಕತಿ ರಸೀದಿ
    8) ಚಂದಾದಾರರ ಪಟ್ಟಿ.
    9) ಸಿಬ್ಬಂದಿ ವಿವರ.
    10) ಪತ್ರಿಕೆ ಸಾಗಾಣಿಕೆ ಮಾಹಿತಿ.

2. ಒಂದು ಪತ್ರಿಕೆಯು ಒಂದಕ್ಕಿಂತ ಹೆಚ್ಚು ಕೇಂದ್ರಗಳಲ್ಲಿ ಪ್ರತ್ಯೇಕವಾಗಿ ಮುದ್ರಣಗೊಂಡು ಪ್ರತ್ಯೇಕ ಆವೃತ್ತಿಗಳಾಗಿ ಪ್ರಕಟವಾಗುತ್ತಿದ್ದಲ್ಲಿ ಅಂತಹ ಪತ್ರಿಕೆಗೆ ಆವೃತ್ತಿವಾರು ಜಾಹೀರಾತು ದರ ನಿಗದಿಪಡಿಸಬೇಕು ಮತ್ತು ಸಾಂದರ್ಭಿಕ ಆಕರ್ಷಕ ಜಾಹೀರಾತುಗಳನ್ನು ಪತ್ರಿಕೆಯ ಎಲ್ಲ ಆವೃತ್ತಿಗಳಿಗೆ ಬಿಡುಗಡೆ ಮಾಡಬೇಕಾದಾಗ ಪತ್ರಿಕೆಯ ಸಂಯುಕ್ತ ಆವೃತ್ತಿಗೆ ಅನ್ವಯಿಸಿ ಜಾಹೀರಾತು ದರವನ್ನು ಕೆಳಕಂಡ ವಿಧಾನ ಅನುಸರಿಸಿ ವಾರ್ತಾ ಇಲಾಖೆಯ ನಿರ್ದೇಶಕರು ನಿಗದಿಪಡಿಸಬೇಕು.
   1) ಮೂಲದರ ಪ್ರ.ಚ.ಸೆಂ.ಮೀಗೆ ರೂ.36.00
   2) ಇನ್ನುಳಿದ ಪ್ರತಿ ಆವೃತ್ತಿಗೆ ಮೂಲ ದರದ 1/3 ಭಾಗ
      ಅಂದರೆ 36 x 1/3=12 --- ಗರಿಷ್ಟ ಪ್ರ.ಚ.ಸೆಂ.ಮೀಗೆ ರೂ.75.00 ಮೀರಬಾರದು.

ಟಿಪ್ಪಣಿ –

1. ಪ್ರಾದೇಶಿಕ ಪತ್ರಿಕೆಗಳ ಪ್ರಸಾರಸಂಖ್ಯೆ 50,000 ಪ್ರತಿಗಳು ಮೀರಿದಾಗ ಪ್ರಸಾರಸಂಖ್ಯೆ ಕುರಿತು ಸಂಬಂಧಪಟ್ಟ ಪತ್ರಿಕೆಗಳು ಎ.ಬಿ.ಸಿ ಸಂಸ್ಥೆಯಿಂದ ವರದಿ ಪಡೆದು ಸಲ್ಲಿಸಬೇಕು. ಈ ವರದಿಯನುಸಾರ ಪ್ರಸಾರಸಂಖ್ಯೆ 50,000 ಪ್ರತಿಗಳಿಂದ 75,000 ಪ್ರತಿಗಳವರೆಗೆ ಪ್ರತಿ ಸಾವಿರ ಪ್ರಸಾರ ಸಂಖ್ಯೆಯ ಹೆಚ್ಚಳಕ್ಕೆ ಪ್ರ.ಚ.ಸೆಂ.ಮೀಗೆ ರೂ.1/- ರಂತೆ ಜಾಹೀರಾತು ದರ ಹೆಚ್ಚಿಸಲು ವಾರ್ತಾ ಇಲಾಖೆಯ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.
2. ಈ ರೀತಿ ದರ ನಿಗದಿಪಡಿಸುವಾಗ ರಾಜ್ಯ ಮಟ್ಟದ ಪತ್ರಿಕೆಗಳಿಗೆ ನಿಗದಿಪಡಿಸುವ ಕನಿಷ್ಟ ದರ ಮೀರಬಾರದು.
3. ಜಿಲ್ಲಾ ಮಟ್ಟದ ಪತ್ರಿಕೆಗಳು, ಪ್ರಾದೇಶಿಕ ಪತ್ರಿಕೆಗಳು, ನಿಯತಕಾಲಿಕಗಳು ಜಾಹೀರಾತು ದರಗಳನ್ನು ಪ್ರತಿ 2 ವರ್ಷಕ್ಕೊಮ್ಮೆ ಶೇಕಡಾ 12ರ ಪ್ರಮಾಣದಲ್ಲಿ ಮತ್ತು ರಾಜ್ಯ ಮಟ್ಟದ ಪತ್ರಿಕೆಗಳು ಜಾಹೀರಾತು ದರಗಳನ್ನು ಪ್ರತಿ 2 ವರ್ಷಕ್ಕೊಮ್ಮೆ ಅವುಗಳ ಪ್ರಸಾರ ಸಂಖ್ಯೆ ಆಧರಿಸಿ ಕೆಳಕಂಡ ಸಿದ್ಧ ಮಾದರಿಯಲ್ಲಿ ಜಾಹೀರಾತು ದರಗಳನ್ನು ಹೆಚ್ಚಿಸಲು ವಾರ್ತಾ ಇಲಾಖೆಯ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.

2) ರಾಜ್ಯ ಮತ್ತು ರಾಷ್ಟ್ರಮಟ್ಟದ ಪತ್ರಿಕೆಗಳ ಜಾಹೀರಾತು ದರ ಹೆಚ್ಚಿಸಲು ಕೆಳಕಂಡ ವಿಧಾನ ಅನ್ವಯಿಸಬೇಕು

ಕ್ರಮ ಸಂಖ್ಯೆ	ಪ್ರಸಾರಸಂಖ್ಯೆ ವ್ಯಾಪ್ತಿ	ದರ ಪರಿಷ್ಕರಣೆಯ ವ್ಯಾಪ್ತಿ ಪ್ರ.ಚ.ಸೆಂ.ಮೀಗೆ (ರೂ.ಗಳಲ್ಲಿ)	ನಿಗದಿಯಾಗುವ ಜಾಹೀರಾತು ದರ ವ್ಯಾಪ್ತಿ ಪ್ರ.ಚ.ಸೆಂ.ಮೀ.ಗೆ (ರೂ.ಗಳಲ್ಲಿ)
1	75 ಸಾವಿರದಿಂದ 1ಲಕ್ಷ ಪ್ರತಿಗಳು	–	75–00
2	1 ಲಕ್ಷ – 2 ಲಕ್ಷ ಪ್ರತಿಗಳು	50–00	75–125
3	2 ಲಕ್ಷ– 3ಲಕ್ಷ	50–00	125–175
4	3 ಲಕ್ಷ – 4 ಲಕ್ಷ	45–00	175–220
5	4 ಲಕ್ಷ – 5 ಲಕ್ಷ	45–00	220–265
6	5 ಲಕ್ಷ – 6 ಲಕ್ಷ	45–00	265–310
7	6 ಲಕ್ಷ – 7.50 ಲಕ್ಷ	40–00	310–350
8	7.50 ಲಕ್ಷ –9 ಲಕ್ಷ	40–00	350–390
9	9 ಲಕ್ಷ – 10.50 ಲಕ್ಷ	40–00	390–430
10	10.50 ಲಕ್ಷ – 12 ಲಕ್ಷ	40–00	430–470
11	12 ಲಕ್ಷ – 14 ಲಕ್ಷ	35–00	470–505
12	14 ಲಕ್ಷ – 16 ಲಕ್ಷ	35–00	505–540
13	16 ಲಕ್ಷ – 18 ಲಕ್ಷ	30–00	540–570
14	18 ಲಕ್ಷ – 20 ಲಕ್ಷ	30–00	570–600
15	20 ಲಕ್ಷ – 22 ಲಕ್ಷ	30–00	600–630
16	22 ಲಕ್ಷ – 25 ಲಕ್ಷ	30–00	630–660

ಟಿಪ್ಪಣಿ:

1. ಮೇಲ್ಕಂಡ ಜಾಹೀರಾತು ದರಗಳು ಪತ್ರಿಕೆಗಳಲ್ಲಿ ಪ್ರಕಟವಾಗುವ ಕಪ್ಪು-ಬಿಳುಪು ಜಾಹೀರಾತುಗಳಿಗೆ ಅನ್ವಯವಾಗುತ್ತವೆ. ಜಾಹೀರಾತುಗಳು ಬಹುವರ್ಣದಲ್ಲಿ ಪ್ರಕಟಗೊಂಡಲ್ಲಿ ನಿಗದಿತ ಜಾಹೀರಾತು ದರಕ್ಕೆ ಹೆಚ್ಚುವರಿಯಾಗಿ ಶೇಕಡಾ 25ರ ಜಾಹೀರಾತು ದರಗಳು ಅನ್ವಯಿಸುತ್ತವೆ.

2. ಅಗತ್ಯ ಸಂದರ್ಭಗಳಲ್ಲಿ ಪತ್ರಿಕೆಗಳ ಪ್ರೀಮಿಯಂ ಸ್ಥಳದಲ್ಲಿ ಅಂದರೆ ಮುಖಪುಟ, ರಕ್ಷಾಪುಟ, ಶೀರ್ಷಿಕೆಯ ಅಡಿಭಾಗ ಇತ್ಯಾದಿ ಪ್ರಮುಖ ಸ್ಥಾನದಲ್ಲಿ ಜಾಹೀರಾತು ಪ್ರಕಟಿಸಬೇಕಾದಲ್ಲಿ ಸಂದರ್ಭ, ಸನ್ನಿವೇಶ ಮತ್ತು ಅಗತ್ಯಕ್ಕನುಗುಣವಾಗಿ ನಿಗದಿತ ಜಾಹೀರಾತು ದರಕ್ಕೆ ಹೆಚ್ಚುವರಿಯಾಗಿ ಗರಿಷ್ಠ ಶೇಕಡಾ 100 ರ ಪ್ರಮಾಣ ಮೀರದಂತೆ ಜಾಹೀರಾತು ದರ ನಿಗದಿಪಡಿಸಿ ಜಾಹೀರಾತು ಪ್ರಕಟಿಸಲು ವಾರ್ತಾ ಇಲಾಖೆಯ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.

3. ರಾಷ್ಟ್ರ ಮಟ್ಟದ ಪತ್ರಿಕೆಗಳು ಕೇಂದ್ರ ಸರ್ಕಾರದ ಡಿ.ಎ.ವಿ.ಪಿ ವಿಭಾಗವು ನಿಗದಿಪಡಿಸಿದ ದರವನ್ನೇ ನಿಗದಿಪಡಿಸಲು ಕೋರಿದಲ್ಲಿ ಆ ದರವನ್ನು ಒಪ್ಪಿ ನಿಗದಿಪಡಿಸಲು ವಾರ್ತಾ ಇಲಾಖೆಯ ನಿರ್ದೇಶಕರಿಗೆ ಅಧಿಕಾರ ಇರುತ್ತದೆ.

15) <u>ಹೊರರಾಜ್ಯದ ಪತ್ರಿಕೆಗಳು :</u>

ಕರ್ನಾಟಕ ಹೊರತುಪಡಿಸಿ ಬೇರೆ ರಾಜ್ಯದಲ್ಲಿ ಪ್ರಕಟವಾಗುವ ಕನ್ನಡ ಮತ್ತು ಅನ್ಯಭಾಷಾ ಪತ್ರಿಕೆಗಳು

1) ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಗೆ ಸೇರಲು ಹೊರ ರಾಜ್ಯದಲ್ಲಿ ಪ್ರಕಟವಾಗುವ ಪತ್ರಿಕೆಗಳ ಅರ್ಹತೆಗಳು:

1) ಪತ್ರಿಕೆಯ ಆರ್.ಎನ್.ಐ ಪ್ರಮಾಣಪತ್ರ.
2) ಡಿಕ್ಲರೇಷನ್ ಪ್ರತಿ.
3) ಪ್ರತಿ ಸಂಚಿಕೆ ಕನಿಷ್ಟ 1000 ಪ್ರತಿ ಪ್ರಸಾರ ಹೊಂದಿರಬೇಕು. ಈ ಬಗ್ಗೆ ವಾರ್ತಾ ಇಲಾಖೆಯ ಸ್ಥಳೀಯ ಅಧಿಕಾರಿಗಳಿಂದ ಅಥವಾ ವಾರ್ತಾ ಇಲಾಖೆಯ ನಿರ್ದೇಶಕರು ನಿಯೋಜಿತ ಅಧಿಕಾರಿಗಳಿಂದ ವರದಿ ಪಡೆಯಬೇಕು.
4) ಮುದ್ರಕರಿಂದ ಮಾಡಿಕೊಂಡ ಕರಾರು ಪತ್ರ ಮತ್ತು ಹಣ ಪಾವತಿ ರಸೀದಿ.
5) ಪತ್ರಿಕೆಯ ವಿತರಣಾ ವಿವರ.
6) 20/- ರೂಗಳ ಸ್ವಘೋಷಿತಾ ಪ್ರಮಾಣಪತ್ರ.
7) ಪ್ರತಿ ಪ್ರಕಟಣಾ ಕೇಂದ್ರದಲ್ಲಿ ಕಛೇರಿ ಹೊಂದಿರುವ ಬಗ್ಗೆ ಅಗತ್ಯ ದಾಖಲೆ.

ಅಧ್ಯಾಯ-5

ವಿದ್ಯುನ್ಮಾನ ಮಾಧ್ಯಮಗಳು :

(ಟಿ.ವಿ, ರೇಡಿಯೋ, ಎಫ್.ಎಂ, ಕೇಬಲ್, ಇ-ಪತ್ರಿಕೆ ಮತ್ತು ಆನ್‌ಲೈನ್ ಪತ್ರಿಕೆಗಳು ಮತ್ತು ಸಮುದಾಯ ರೇಡಿಯೋ)

16) ಮಾಧ್ಯಮಪಟ್ಟಿ ಸೇರ್ಪಡೆಗೆ ಅರ್ಹತೆಗಳು:

(ಟಿ.ವಿ, ರೇಡಿಯೋ ಮತ್ತು ಎಫ್.ಎಂ. ಸಮುದಾಯ ಕೇಂದ್ರಗಳು)

1. ವಿದ್ಯುನ್ಮಾನ ಮಾಧ್ಯಮಗಳು ಕೇಂದ್ರ ಸರ್ಕಾರದ "ಪ್ರಸಾರ ಭಾರತಿ" ಯಿಂದ ಮಾನ್ಯತೆ ಪಡೆದಿರಬೇಕು.
2. ಕೇಂದ್ರ ಸರ್ಕಾರದ ಡಿ.ಎ.ವಿ.ಪಿ ನಿಗದಿಪಡಿಸಿ ಹೊರಡಿಸಿರುವ ದರ ಪತ್ರದ ಪ್ರತಿ ಒದಗಿಸಬೇಕು.
3. ವಾಹಿನಿಯ ಪ್ರಸಾರ ವ್ಯಾಪ್ತಿ ಬಗ್ಗೆ ಅಧಿಕೃತ ಸಂಸ್ಥೆಯಿಂದ ಪಡೆದ ದಾಖಲೆ ಸಲ್ಲಿಸಬೇಕು.
4. ಕಾರ್ಯಕ್ರಮಗಳ ವೀಕ್ಷಕರ ಸಂಖ್ಯೆಯ ಬಗ್ಗೆ (ಟಿ.ಆರ್.ಪಿ) ಟ್ಯಾಮ್ ಅಥವಾ ಇತರ ಅಧಿಕೃತ ಸಂಸ್ಥೆಯಿಂದ ಪಡೆದಿರುವ ವರದಿಯನ್ನು ಸಲ್ಲಿಸಬೇಕು.
5. ಹಿಂದಿನ ಆರ್ಥಿಕ ಸಾಲಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಕರಿಂದ ಪಡೆದ ವರದಿ ಸಲ್ಲಿಸಬೇಕು.
6. ವಾಹಿನಿಯು ಕಳೆದ ಮೂರು ತಿಂಗಳು ಕಾರ್ಯನಿರತವಾಗಿರುವ ಬಗ್ಗೆ ಇ.ಎಂ.ಎಂ.ಸಿ ಸಂಸ್ಥೆಯಿಂದ ಪಡೆದ ಪ್ರಮಾಣಪತ್ರ ಸಲ್ಲಿಸಬೇಕು.
7. ಅರ್ಜಿ ಸಲ್ಲಿಕೆಯ 3 ತಿಂಗಳ ಅವಧಿಯಲ್ಲಿ ಬೆಳಿಗ್ಗೆ 7-00 ಗಂಟೆಯಿಂದ ರಾತ್ರಿ 11-00 ಗಂಟೆವರೆಗೆ ಪ್ರಸಾರಗೊಳಿಸಿದ ಕಾರ್ಯಕ್ರಮಗಳ ಪಟ್ಟಿಯನ್ನು ಸಲ್ಲಿಸಬೇಕು. (Fixed Point Chart)
8. IBF (Indian Broadcasting forum)ದಿಂದ ಮಾನ್ಯತೆ ಹೊಂದಿದಲ್ಲಿ ಪ್ರಮಾಣಪತ್ರ ಸಲ್ಲಿಸಬೇಕು.

17) ವಿದ್ಯುನ್ಮಾನ ಮಾಧ್ಯಮದ ವಾಹಿನಿಗಳಿಗೆ ಜಾಹೀರಾತು ದರ ನಿಗದಿ:

(ವಿದ್ಯುನ್ಮಾನ ಮಾಧ್ಯಮ, ಸೈಬರ್ ಮಾಧ್ಯಮ, ಇ-ಪತ್ರಿಕೆ ಮತ್ತು ಆನ್‌ಲೈನ್ ಪತ್ರಿಕೆಗಳಿಗೆ ಜಾಹೀರಾತು ದರ ನಿಗದಿ)

1) ವಿದ್ಯುನ್ಮಾನ ಮಾಧ್ಯಮ :-

1) ಪ್ರಸಾರಭಾರತಿ ಸಂಸ್ಥೆಯ ದೂರದರ್ಶನ ಮತ್ತು ಆಕಾಶವಾಣಿ ವಾಹಿನಿಗಳಿಗೆ ಸದರಿ ಸಂಸ್ಥೆಗಳು ಆಯಾ ಸಂದರ್ಭದಲ್ಲಿ ನಿಗದಿಪಡಿಸಿರುವ ಪ್ರಸಾರ ಶುಲ್ಕಗಳೇ (ಜಾಹೀರಾತು ದರ) ಅನ್ವಯಿಸುತ್ತವೆ. ಅದರಂತೆ ಸದರಿ ವಾಹಿನಿಗಳ ಮುಖಾಂತರ ಜಾಹೀರಾತು ಬಿಡುಗಡೆ ಮಾಡಲು ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.
2) ಖಾಸಗಿ ಟಿ.ವಿ ರೇಡಿಯೊ, ಸಮುದಾಯ ರೇಡಿಯೊ ವಾಹಿನಿಗಳಿಗೆ ಕೇಂದ್ರ ಸರ್ಕಾರದ ಡಿ.ಎ.ವಿ.ಪಿ ದರದಂತೆ ಜಾಹೀರಾತು ಬಿಡುಗಡೆ ಮಾಡಲು ಅಧಿಕಾರವನ್ನು ವಾರ್ತಾ ನಿರ್ದೇಶಕರು ಹೊಂದಿರುತ್ತಾರೆ.
3) ಡಿ.ಎ.ವಿ.ಪಿ ದರ ಹೊಂದಿರದ ಅಥವಾ ಡಿ.ಎ.ವಿ.ಪಿ ದರಗಳಿಗೆ ಒಪ್ಪದ ವಾಹಿನಿಗಳಿಗೆ ಕೇಂದ್ರ ಸರ್ಕಾರದ ಡಿ.ಎ.ವಿ.ಪಿ ದರಗಳೊಂದಿಗೆ ತುಲನೆ ಮಾಡಿ ಟ್ಯಾಮ್ (Tam) ವರದಿಯನ್ನು ಗಣನೆಗೆ ತೆಗೆದುಕೊಂಡು ಸೂಕ್ತ ಜಾಹೀರಾತು ದರ ನಿಗದಿಪಡಿಸುವ ಅಧಿಕಾರವನ್ನು ವಾರ್ತಾ ನಿರ್ದೇಶಕರು ಹೊಂದಿರುತ್ತಾರೆ.
4) ವಿದ್ಯುನ್ಮಾನ ಮಾಧ್ಯಮದ ಖಾಸಗಿ ವಾಹಿನಿಗಳ ಜಾಹೀರಾತು ದರಗಳನ್ನು ಪ್ರತಿ ವರ್ಷ ಟ್ಯಾಮ್ ವರದಿ ಆಧಾರಿಸಿ ಪರಿಷ್ಕರಿಸುವ ಅಧಿಕಾರವನ್ನು ವಾರ್ತಾ ನಿರ್ದೇಶಕರಿಗೆ ಪ್ರತ್ಯಾಯೋಜಿಸಿದೆ.

2) ಬಸ್ಸು ಮತ್ತು ರೈಲ್ವೆ ನಿಲ್ದಾಣ:

1. ರಾಜ್ಯದ ಕೆ.ಎಸ್.ಆರ್.ಟಿ.ಸಿ, ನಗರ ಸಾರಿಗೆ ಬಸ್ ನಿಲ್ದಾಣಗಳಲ್ಲಿ, ಬಸ್‌ಗಳಲ್ಲಿ ಮತ್ತು ರೈಲ್ವೆ ನಿಲ್ದಾಣಗಳಲ್ಲಿ ಮತ್ತು ರೈಲುಗಳಲ್ಲಿ ಅಳವಡಿಸಿರುವ ವಿದ್ಯುನ್ಮಾನ ಸಾಧನಗಳ (ದೃಶ್ಯ ಮತ್ತು

ಶ್ರವಣ) ಮೂಲಕ ಡಿ.ಎ.ವಿ.ಪಿ ದರಗಳಂತೆ ಜಾಹೀರಾತು ಪ್ರಸಾರ ಮಾಡಲು ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.

2. ಡಿಎವಿಪಿ ದರಗಳು ಇಲ್ಲದಿದ್ದ ಪಕ್ಷದಲ್ಲಿ ಅರ್ಜಿ ಸಲ್ಲಿಸಿದ ಜಾಹೀರಾತು ಸಂಸ್ಥೆಗಳು ಮೇಲೆ ಹೆಸರಿಸಿದ ಕೆ.ಎಸ್.ಆರ್.ಟಿ.ಸಿ/ನಗರ ಸಾರಿಗೆ/ರೈಲ್ವೆ ಮಂಡಳಿಯ ಏಕೈಕ ಅಂಗೀಕೃತ ಜಾಹೀರಾತು ಸಂಸ್ಥೆಯಾಗಿದ್ದಲ್ಲಿ ಮಾತ್ರ (ಈ ಬಗ್ಗೆ ಸಂಬಂಧಪಟ್ಟ ಸಂಸ್ಥೆಯಿಂದ ಪ್ರಮಾಣಪತ್ರ ಪಡೆದುಕೊಂಡ ದಾಖಲೆ ಒದಗಿಸಬೇಕು) ವಾರ್ತಾ ಇಲಾಖೆಯ ನಿರ್ದೇಶಕರು ಸಂಧಾನದ ಮೂಲಕ ಜಾಹೀರಾತು ಪ್ರಸಾರ ಶುಲ್ಕ ನಿಗದಿಪಡಿಸುವ ಅಧಿಕಾರ ಹೊಂದಿರುತ್ತಾರೆ.
3. ಕೆ.ಎಸ್.ಆರ್.ಟಿ.ಸಿ/ನಗರ ಸಾರಿಗೆ/ರೈಲ್ವೆ ಮಂಡಳಿಯೊಂದಿಗೆ ಮಾಡಿಕೊಂಡಿರುವ ಕರಾರು ಪತ್ರವನ್ನು ಸಲ್ಲಿಸಬೇಕು.

೩) ಸಮುದಾಯ ರೇಡಿಯೋ (ನಮ್ಮ ಬಾನುಲಿ) :-

1. ಸಮುದಾಯ ರೇಡಿಯೋ ವಾಹಿನಿಗಳಿಗೆ ಡಿ.ಎ.ವಿ.ಪಿ ನಿಗದಿಪಡಿಸಿದ ದರಗಳಂತೆ ಜಾಹೀರಾತು ಬಿಡುಗಡೆ ಮಾಡಲು ವಾರ್ತಾ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.
2. ಡಿ.ಎ.ವಿ.ಪಿ ದರ ಹೊಂದಿರದ ಪ್ರಕರಣಗಳಲ್ಲಿ ಆಯಾ ಸಮುದಾಯ ರೇಡಿಯೋ ಕೇಂದ್ರಗಳ ಜೊತೆ ಸಮಾಲೋಚಿಸಿ ಅವುಗಳ ಪ್ರಸಾರ ವ್ಯಾಪ್ತಿ ಆಧರಿಸಿ ಸ್ಪರ್ಧಾತ್ಮಕ ದರದಲ್ಲಿ ಪ್ರತಿ 10 ಸೆಕೆಂಡಿಗೆ ಸೂಕ್ತ ಜಾಹೀರಾತು ದರವನ್ನು ನಿಗದಿಪಡಿಸಲು ವಾರ್ತಾ ಇಲಾಖೆಯ ನಿರ್ದೇಶಕರಿಗೆ ಸಂಪೂರ್ಣ ಅಧಿಕಾರವಿರುತ್ತದೆ.

4) ಕೇಬಲ್ ಟಿ.ವಿ. :-

ರಾಜ್ಯ ವ್ಯಾಪಿ ಮತ್ತು ಜಿಲ್ಲೆಗಳಲ್ಲಿ ಪ್ರಸಾರ ಕೇಂದ್ರಗಳನ್ನು ಹೊಂದಿ, ಅದರಂತೆ ಪ್ರಸಾರ ಸಾಮರ್ಥ್ಯ ಹೊಂದಿರುವ ಸ್ಥಳೀಯ ಕೇಬಲ್ ವಾಹಿನಿಗಳಲ್ಲಿ ಡಿ.ಎ.ವಿ.ಪಿ ದರದಲ್ಲಿ ಜಾಹೀರಾತು ಬಿಡುಗಡೆ ಮಾಡುವ ಅಧಿಕಾರವನ್ನು ವಾರ್ತಾ ಇಲಾಖೆಯ ನಿರ್ದೇಶಕರು ಹೊಂದಿರುತ್ತಾರೆ.

ಡಿ.ಎ.ವಿ.ಪಿ ದರ ಹೊಂದಿಲ್ಲದ ಪ್ರಕರಣಗಳಲ್ಲಿ ಸಂಪರ್ಕಗಳ ಸಂಖ್ಯೆ ಮತ್ತು ಪ್ರಸಾರ ವ್ಯಾಪ್ತಿ ಪರಿಗಣಿಸಿ ಈ ವಾಹಿನಿಗಳಿಗೆ ಪ್ರಸಾರ ಶುಲ್ಕ ನಿಗದಿಪಡಿಸಲು ಆಯಾ ಸನ್ನಿವೇಶಕ್ಕನುಗುಣವಾಗಿ ಕೇಬಲ್ ವಾಹಿನಿಗಳ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ ಶುಲ್ಕ ನಿಗದಿಪಡಿಸುವ ಅಧಿಕಾರವನ್ನು ಸಹ ವಾರ್ತಾ ಇಲಾಖೆಯ ನಿರ್ದೇಶಕರು ಹೊಂದಿರುತ್ತಾರೆ.

೫) ಸೈಬರ್ ಮಾಧ್ಯಮ :-

ಕ್ರ. ಸಂ.	ಸೈಬರ್ ಮಾಧ್ಯಮದ ಹೆಸರು	ಸಂದರ್ಶಕರ ಸಂಖ್ಯೆ	ದರ (ರೂ.ಗಳಲ್ಲಿ) (ಪ್ರ.ಚದರ.ಸೆಂ.ಮೀ.ಗೆ)
1.	ಅಂತರ್ಜಾಲ / ವೆಬ್ ಪೋರ್ಟಲ್	ಪ್ರತಿ ದಿನ ಕನಿಷ್ಠ 500	5/-
		ಕನಿಷ್ಠ 1,000	5/-
		ಕನಿಷ್ಠ 1,000 ಮೇಲ್ಪಟ್ಟು ಗರಿಷ್ಠ 10,000	15/-
		ಕನಿಷ್ಠ 10,000 ಮೇಲ್ಪಟ್ಟು ಗರಿಷ್ಠ 50,000	30/-
		ಕನಿಷ್ಠ 50,000 ಮೇಲ್ಪಟ್ಟು ಗರಿಷ್ಠ 1,00,000	50/-
		ಕನಿಷ್ಠ 1,00,000 ಮೇಲ್ಪಟ್ಟು ಗರಿಷ್ಠ 5,00,000	80/-
		ಕನಿಷ್ಠ 5,00,000 ಮೇಲ್ಪಟ್ಟು ಗರಿಷ್ಠ 10,00,000	100/-

ಮೇಲ್ಕಂಡಂತೆ ಸೈಬರ್ ಮಾಧ್ಯಮಗಳಿಗೆ ಜಾಹೀರಾತು ಬಿಡುಗಡೆ ಮಾಡಲು ಮತ್ತು ದರ ನಿಗದಿಪಡಿಸುವ ಅಧಿಕಾರವನ್ನು ಸಹ ವಾರ್ತಾ ಇಲಾಖೆಯ ನಿರ್ದೇಶಕರು ಹೊಂದಿರುತ್ತಾರೆ.

ಅಧ್ಯಾಯ-6

18) **ಅಂಗೀಕೃತ ಜಾಹೀರಾತು ಸಂಸ್ಥೆಗಳು ಮತ್ತು ಜಾಹೀರಾತು ಬಿಡುಗಡೆ**

(ADVERTISING AGENCIES)

ವಿವಿಧ ಸಮೂಹ ಮಾಧ್ಯಮಗಳಿಗೆ ಜಾಹೀರಾತು ವಿನ್ಯಾಸ ರಚಿಸಿ ಬಿಡುಗಡೆ ಮಾಡುವ ಶಕ್ತಿ ಸಾಮರ್ಥ್ಯ ಹೊಂದಿರುವ ಜಾಹೀರಾತು ಸಂಸ್ಥೆಗಳ ಅಂಗೀಕೃತ ಪಟ್ಟಿಯನ್ನು ಇಲಾಖೆಯು ಪ್ರತಿ ಎರಡು ವರ್ಷಕ್ಕೊಮ್ಮೆ ಸಿದ್ಧಪಡಿಸಬೇಕು. ಅಂಗೀಕೃತ ಪಟ್ಟಿಯಲ್ಲಿ ನೋಂದಾಯಿತ ಜಾಹೀರಾತು ಸಂಸ್ಥೆಯಾಗಿ ಸ್ಥಾನ ಪಡೆಯಲು ಜಾಹೀರಾತು ಸಂಸ್ಥೆಗಳು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

1. ಐ.ಎನ್.ಎಸ್ (ಇಂಡಿಯನ್ ನ್ಯೂಸ್ ಪೇಪರ್ಸ್ ಸೊಸೈಟಿ) ಸಂಸ್ಥೆಯಿಂದ ಮಾನ್ಯತೆ ಹೊಂದಿರಬೇಕು.
2. ಪ್ರಮುಖವಾಗಿ ಕನ್ನಡ ಹಾಗೂ ಆಂಗ್ಲ ಭಾಷೆಯ ಜ್ಞಾನ ಹೊಂದಿರಬೇಕು. ದೇಶದ ಇತರೆ ಭಾಷೆಗಳಲ್ಲಿ ಪ್ರಚಾರ ಕೈಗೊಳ್ಳುವ ಸೌಲಭ್ಯ ಮತ್ತು ಸಾಮರ್ಥ್ಯ ಹೊಂದಿರಬೇಕು.
3. ಜಾಹೀರಾತು ವಿನ್ಯಾಸಗಳನ್ನು ತಯಾರಿಸಲು ಅವಶ್ಯವಿರುವ ಎಲ್ಲಾ ಮೂಲಸೌಕರ್ಯಗಳನ್ನು ಹೊಂದಿರಬೇಕು.
4. ಸಂಸ್ಥೆಯು ಅರ್ಜಿ ಸಲ್ಲಿಸುವ ಹಿಂದಿನ ಅನುಕ್ರಮ ಮೂರು ಆರ್ಥಿಕ ವರ್ಷಗಳಲ್ಲಿ ಪ್ರತಿವರ್ಷ ಕನಿಷ್ಟ 1 ಕೋಟಿ ರೂ.ಗಳ ವಹಿವಾಟು ನಡೆಸಿರಬೇಕು.
5. ಸಂಸ್ಥೆಯು ಬೆಂಗಳೂರು, ಬೆಂಗಳೂರಿನಲ್ಲಿ ಪೂರ್ಣ ಪ್ರಮಾಣದ ಕಛೇರಿ ಹೊಂದಿರಬೇಕು.
6. ಸಂಸ್ಥೆಯು ಪ್ರಸ್ತುತ ದೇಶದ 2 ಸಾರ್ವಜನಿಕ ಉದ್ದಿಮೆ (PSU) ಗಳ/ಕಂಪನಿಗಳ ಮತ್ತು ಯಾವುದಾದರೊಂದು ಬೇರೆ ರಾಜ್ಯದ ಅಂಗೀಕೃತ ಜಾಹೀರಾತು ಪಟ್ಟಿಯಲ್ಲಿರಬೇಕು.
7. ಜಾಹೀರಾತು ಸಂಸ್ಥೆಗಳನ್ನು ಪ್ರಧಾನವಾಗಿ " ಎ " ಮತ್ತು " ಬಿ " ಕ್ಯಾಟಗರಿಗಳಾಗಿ ವಿಂಗಡಿಸಬೇಕು

ಕ್ಯಾಟಗರಿ-' ಎ '
1) ಕರ್ನಾಟಕ ಸಂಸ್ಥೆಯ ವಾರ್ಷಿಕ ವಹಿವಾಟು ಕನಿಷ್ಟ ರೂ. 5.00 ಕೋಟಿ ಮೀರಿರಬೇಕು.
2) ಕರ್ನಾಟಕ ರಾಜ್ಯದಲ್ಲಿ ಕೇಂದ್ರ ಕಛೇರಿ ಹೊಂದಿರಬೇಕು.
3) ಸಂಸ್ಥೆಯು ಕರ್ನಾಟಕದ ಜೊತೆಗೆ ಇತರ ಕನಿಷ್ಟ 2 ರಾಜ್ಯಗಳಲ್ಲಿ ಶಾಖಾ ಕಛೇರಿ ಹೊಂದಿರಬೇಕು.
4) ಸಂಸ್ಥೆಯು ಹಿಂದಿನ 3 (ಮೂರು) ವರ್ಷಗಳಲ್ಲಿ ಐ.ಎನ್.ಎಸ್ ನಿಂದ ಅನರ್ಹಗೊಂಡಿರಬಾರದು.

ಕ್ಯಾಟಗರಿ-' ಬಿ '
1) ಕರ್ನಾಟಕದ ಸಂಸ್ಥೆಯ ವಾರ್ಷಿಕ ವಹಿವಾಟು ಕನಿಷ್ಠ ರೂ.1.00 ಕೋಟಿ ಇರಬೇಕು.
2) ಇತರೆ ರಾಜ್ಯದಲ್ಲಿ ಕೇಂದ್ರ ಕಛೇರಿ ಹೊಂದಿದ್ದಲ್ಲಿ ಬೆಂಗಳೂರಿನಲ್ಲಿ ಶಾಖಾ ಕಛೇರಿ ಹೊಂದಿರಬೇಕು.
3) ಸಂಸ್ಥೆಯು ಹಿಂದಿನ ಒಂದು ಆರ್ಥಿಕ ವರ್ಷದಲ್ಲಿ ಐ.ಎನ್.ಎಸ್ ನಿಂದ ಅನರ್ಹಗೊಂಡಿರಬಾರದು.

ಟಿಪ್ಪಣಿ:

1. ಅಂಗೀಕೃತ ಜಾಹೀರಾತು ಸಂಸ್ಥೆಗಳನ್ನು ಆಯ್ಕೆ ಮಾಡುವ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿ, ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸೂಕ್ತ ಪರಿಣಿತರನ್ನೊಳಗೊಂಡಂತೆ ಇಲಾಖೆಯ ಅಧಿಕಾರಿಗಳ ಸಮಿತಿಯನ್ನು ರಚಿಸಿಕೊಂಡು ಜಾಹೀರಾತು ಸಂಸ್ಥೆಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ವಾರ್ತಾ ಇಲಾಖೆಯ ನಿರ್ದೇಶಕರು ಹೊಂದಿರುತ್ತಾರೆ.
2. ಜಾಹೀರಾತು ಸಂಸ್ಥೆಗಳನ್ನು ಅಂಗೀಕೃತ ಪಟ್ಟಿಯಿಂದ ಕೈಬಿಡುವ ಮತ್ತು ಜಾಹೀರಾತು ವಿನ್ಯಾಸಗಳ ಆಯ್ಕೆಗೆ ಸಂಬಂಧಿಸಿದಂತೆ ವಾರ್ತಾ ನಿರ್ದೇಶಕರು ಪ್ರತ್ಯೇಕ ಮಾರ್ಗಸೂಚಿ ರೂಪಿಸಿಕೊಳ್ಳಬೇಕು.

19) **ಟೆಂಡರ್ ಮತ್ತು ವರ್ಗೀಕೃತ ಜಾಹೀರಾತು ಬಿಡುಗಡೆಗೆ ಮಾರ್ಗಸೂಚಿ :**

ಕಾಮಗಾರಿ / ಸರಕು ಖರೀದಿ ಮೌಲ್ಯ	ಜಾಹೀರಾತು ಬಿಡುಗಡೆ
• 1 ಲಕ್ಷ ರೂಗಳಿಂದ 10 ಲಕ್ಷ ರೂಗಳವರೆಗಿನ ಕಾಮಗಾರಿ.	ಕಾಮಗಾರಿ ವ್ಯಾಪ್ತಿ ಪ್ರದೇಶದಲ್ಲಿನ ಎರಡು ಜಿಲ್ಲಾ ದಿನಪತ್ರಿಕೆಗಳು ಮತ್ತು ಒಂದು ಪ್ರಾದೇಶಿಕ ದಿನಪತ್ರಿಕೆಯಲ್ಲಿ ಟೆಂಡರ್ ಜಾಹೀರಾತು.
• 1 ಲಕ್ಷ ರೂಗಳಿಂದ 10 ಲಕ್ಷ ರೂಗಳವರೆಗಿನ ಸರಕು ಖರೀದಿ, ಬಾಹ್ಯ ಮೂಲದ ಗುತ್ತಿಗೆ ಆಧಾರಿತ ಸೇವೆಗಳು, ವಿಶೇಷ ಅಧಿಸೂಚನೆಗಳು, ನೌಕರರ ನೇಮಕಾತಿ, ಶಿಸ್ತು ಪ್ರಕರಣದ ವಿಷಯಗಳು	ಸಂಬಂಧಿಸಿದ ಪ್ರದೇಶದ ವ್ಯಾಪ್ತಿಯ ಜಿಲ್ಲಾಮಟ್ಟದ ಒಂದು ಪತ್ರಿಕೆ, ಒಂದು ಪ್ರಾದೇಶಿಕ ಪತ್ರಿಕೆ ಹಾಗೂ ರಾಜ್ಯಮಟ್ಟದ ಒಂದು ಕನ್ನಡ ದಿನ ಪತ್ರಿಕೆಯಲ್ಲಿ ಟೆಂಡರ್ ಅಥವಾ ವರ್ಗೀಕೃತ ಜಾಹೀರಾತು.
• 10 ಲಕ್ಷ ರೂಗಳಿಂದ 30 ಲಕ್ಷ ರೂಗಳವರೆಗಿನ ಒಂದು ನಿರ್ದಿಷ್ಟ ಕಾಮಗಾರಿ /ಸರಕು /ಸೇವೆ ಖರೀದಿ	ಕಾಮಗಾರಿ ವ್ಯಾಪ್ತಿ ಪ್ರದೇಶದಲ್ಲಿನ ಎರಡು ಜಿಲ್ಲಾ ಮಟ್ಟದ ದಿನಪತ್ರಿಕೆಗಳಲ್ಲಿ ಹಾಗೂ ಎರಡು ಪ್ರಾದೇಶಿಕ ಪತ್ರಿಕೆಗಳಲ್ಲಿ ಟೆಂಡರ್ ಮತ್ತು ವರ್ಗೀಕೃತ ಜಾಹೀರಾತು.
• 30 ಲಕ್ಷ ರೂಗಳಿಂದ 50 ಲಕ್ಷ ರೂಪಾಯಿಗಳವರೆಗಿನ ಯಾವುದೇ ಒಂದು ನಿರ್ದಿಷ್ಟ ಕಾಮಗಾರಿ/ ಸರಕು/ ಸೇವೆ ಖರೀದಿ	ಕಾಮಗಾರಿ ವ್ಯಾಪ್ತಿ ಪ್ರದೇಶದಲ್ಲಿ ಪ್ರಸಾರ ಹೊಂದಿರುವ ಒಂದು ಜಿಲ್ಲಾ ಮಟ್ಟದ ದಿನಪತ್ರಿಕೆ ಮತ್ತು ಎರಡು ಪ್ರಾದೇಶಿಕ ದಿನಪತ್ರಿಕೆಗಳು ಮತ್ತು ಕಾಮಗಾರ ವ್ಯಾಪ್ತಿಯಲ್ಲಿ ಪ್ರತ್ಯೇಕ ಆವೃತ್ತಿ ಹೊಂದಿರುವ ರಾಜ್ಯಮಟ್ಟದ ಎರಡು ಕನ್ನಡ ದಿನಪತ್ರಿಕೆಗಳಲ್ಲಿ ಟೆಂಡರ್ ಅಥವಾ ವರ್ಗೀಕೃತ ಜಾಹೀರಾತು.
• 50 ಲಕ್ಷಗಳ ಮೇಲ್ಪಟ್ಟ ಮೊತ್ತದ ಯಾವುದೇ ಒಂದು ನಿರ್ದಿಷ್ಟ ಕಾಮಗಾರಿ / ಸರಕು / ಸೇವೆ ಖರೀದಿ	ರಾಜ್ಯ ಮಟ್ಟದ ಎರಡು ಕನ್ನಡ ದಿನಪತ್ರಿಕೆಗಳು ಮತ್ತು ಒಂದು ಆಂಗ್ಲ ದಿನ ಪತ್ರಿಕೆಯಲ್ಲಿ ಟೆಂಡರ್ ಅಥವಾ ವರ್ಗೀಕೃತ ಜಾಹೀರಾತು.
• ವಿಶ್ವ ಬ್ಯಾಂಕ್ / ವಿದೇಶಿ ನೆರವಿನ ಯೋಜನೆಗಳು ಹಾಗೂ ಅಗತ್ಯ ಸಂದರ್ಭಗಳಲ್ಲಿ	ಇಲಾಖಾ ಮುಖ್ಯಸ್ಥರ ವಿವೇಚನೆ ಅಥವಾ ಸಂಬಂಧಪಟ್ಟ ಇಲಾಖೆಯ ಕೋರಿಕೆಯಂತೆ. ಅಪೇಕ್ಷೆ ಪಡುವ ಪತ್ರಿಕೆಗಳಲ್ಲಿ ಟೆಂಡ್ ಅಥವಾ ವರ್ಗೀಕೃತ ಜಾಹೀರಾತು
• ಕೇಂದ್ರ ನೆರವಿನ ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಕಾಮಗಾರಿಗಳು	ರಾಜ್ಯಮಟ್ಟದ 1 ಕನ್ನಡ ದಿನಪತ್ರಿಕೆ, ರಾಷ್ಟ್ರೀಯ 1 ಹಿಂದಿ ಮತ್ತು 2 ಆಂಗ್ಲ ದಿನ ಪತ್ರಿಕೆಗಳಲ್ಲಿ ಟೆಂಡರ್ ಜಾಹೀರಾತು.
• ಅರಣ್ಯ ಇಲಾಖೆಗೆ ಸಂಬಂಧಿಸಿದ ಹರಾಜಿನ ಪ್ರಕಟಣೆಗಳು	ಇಲಾಖೆಯ ಕೋರಿಕೆಯಂತೆ ಅಥವಾ ವಾರ್ತಾ ಇಲಾಖೆ ನಿರ್ದೇಶಕರ ವಿವೇಚನೆಯಂತೆ ಸೂಕ್ತ ಜಾಹೀರಾತು.
• ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಪಾಲಕರ/ ಪೋಷಕರ ಪತ್ತೆ ಪ್ರಕರಣಗಳು	ಇಲಾಖೆಯ ಕೋರಿಕೆಯಂತೆ, ಸಂಬಂಧಪಟ್ಟ ವ್ಯಾಪ್ತಿಯ ಪತ್ರಿಕೆ ಅಥವಾ ವಾರ್ತಾ ಇಲಾಖೆ ನಿರ್ದೇಶಕರ ವಿವೇಚನೆಯಂತೆ ವರ್ಗೀಕೃತ ಜಾಹೀರಾತು.

ಟಿಪ್ಪಣಿ:

(ಹಲವಾರು ಬಿಡಿಬಿಡಿ ಕಾಮಗಾರಿಗಳ ಜಾಹೀರಾತು ಬಿಡುಗಡೆ ಮಾಡುವಾಗ ಆ ಬಿಡಿ ಕಾಮಗಾರಿಗಳಲ್ಲಿರುವ ಗರಿಷ್ಠ ಮೊತ್ತದ ಕಾಮಗಾರಿಗೆ ಸಂಬಂಧಿಸಿದ ಜಾಹೀರಾತನ್ನು ಪ್ರತ್ಯೇಕವಾಗಿ ಗುರುತಿಸಿ ಅದಕ್ಕೆ ಅನ್ವಯವಾಗುವಂತಹ ಸೂಕ್ತ ಮಟ್ಟದ ದಿನಪತ್ರಿಕೆಗೆ ಪ್ರತ್ಯೇಕವಾಗಿ ಬಿಡುಗಡೆ ಮಾಡಬೇಕು. ಉಳಿದಂತಹ ಕಡಿಮೆ ಮೌಲ್ಯದ ಕಾಮಗಾರಿಗಳ ಜಾಹೀರಾತನ್ನು ಅವುಗಳಿಗೆ ಅನ್ವಯವಾಗುವಂತಹ ಜಿಲ್ಲಾಮಟ್ಟದ ಅಥವಾ ಪ್ರಾದೇಶಿಕಮಟ್ಟದ ದಿನಪತ್ರಿಕೆಗೆ ಬಿಡುಗಡೆ ಮಾಡಬೇಕು. ಸರ್ಕಾರಿ ಇಲಾಖೆಗಳ ಟೆಂಡರ್ ಮತ್ತು ಅಂಗೀಕೃತ ಜಾಹೀರಾತುಗಳನ್ನು ಹಾಗೂ ಅವುಗಳ ಅಧೀನದಲ್ಲಿ ಬರುವ ಎಲ್ಲಾ ನಿಗಮ ಮಂಡಳಿ, ಪ್ರಾಧಿಕಾರ ಸ್ಥಳೀಯ ಸಂಸ್ಥೆಗಳು ತಮ್ಮ ಎಲ್ಲಾ ಜಾಹೀರಾತುಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಕಳುಹಿಸಿಕೊಡಬೇಕು. ವಾರ್ತಾ ಇಲಾಖೆಯು ಈ ಎಲ್ಲಾ ಜಾಹೀರಾತುಗಳನ್ನು ಮೆ॥ ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಸಂಸ್ಥೆಗೆ ಅದರ ಸಾಮರ್ಥ್ಯಕ್ಕೆ ತಕ್ಕಂತೆ ವಹಿಸಬೇಕು.

20) **ಟೆಂಡರ್ ಮತ್ತು ವರ್ಗೀಕೃತ ಜಾಹೀರಾತುಗಳ ವಿಷಯ ರಚನೆ :**

> ಜಾಹೀರಾತು ನೀಡುತ್ತಿರುವ ಇಲಾಖೆ/ಸಂಸ್ಥೆಯ ಹೆಸರು, ಸಂಕ್ಷಿಪ್ತ ವಿಳಾಸ
>
> ಟೆಂಡರ್ / ವರ್ಗೀಕೃತ ಜಾಹೀರಾತು ವಿಷಯ
>
> 1. ಕಾಮಗಾರಿ / ಸರಕು / ಸೇವೆಯ ವಿವರ
> 2. ಕಾಮಗಾರಿ / ಸರಕು / ಸೇವೆಯ ಅಂದಾಜು ಮೊತ್ತ
> 3. ಗುತ್ತಿಗೆದಾರರ ಅರ್ಹತೆ ವಿವರ
> 4. ಕಾಮಗಾರಿ / ಸರಕು / ಸೇವೆಯ ಟೆಂಡರ್ ಮೊತ್ತದ ವಿವರ
> 5. ಟೆಂಡರ್ ಫಾರಂ ಪಡೆಯಲು ಅಂತಿಮ ದಿನಾಂಕ
> 6. ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ
> 7. ಟೆಂಡರ್ ಫಾರಂ ಸಲ್ಲಿಸಲು ಅಂತಿಮ ದಿನಾಂಕ
> 8. ಟೆಂಡರ್ ತೆರೆಯುವ ದಿನಾಂಕ
> 9. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ,
>   ಕಛೇರಿ ವಿಳಾಸ, ದೂರವಾಣಿ ಸಂಖ್ಯೆ
> 10. ಅಂತರ್ಜಾಲ ತಾಣದ ವಿಳಾಸ.
>
> ಟೆಂಡರ್ ಪ್ರಕಟಣೆದಾರರು
> (ಹುದ್ದೆ, ಇಲಾಖೆ ಇತ್ಯಾದಿ)

21) **ಆಕರ್ಷಕ ಜಾಹೀರಾತುಗಳು :**

ಸಾಂದರ್ಭಿಕವಾಗಿ ಪತ್ರಿಕೆಗಳಲ್ಲಿ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ " **ಆಕರ್ಷಕ ಜಾಹೀರಾತು** "ಗಳನ್ನು ಸೂಕ್ತ ವಿನ್ಯಾಸದೊಂದಿಗೆ ಬಿಡುಗಡೆ ಮಾಡಲು " **ಜಾಹೀರಾತು ನೀತಿ 2013** " ರಲ್ಲಿ ಪ್ರಸ್ತಾಪಿಸಿರುವಂತೆ ರಾಜ್ಯ ಮಟ್ಟದ ಸಮನ್ವಯ ಸಮಿತಿಗೆ ಸರ್ಕಾರದ ಎಲ್ಲಾ ಇಲಾಖೆಗಳು ಪ್ರತಿ ಆರ್ಥಿಕ ವರ್ಷದ ಆರಂಭದ ಮುನ್ನ ತಮ್ಮ ಕಾರ್ಯ ವ್ಯಾಪ್ತಿಗೆ ಅನ್ವಯಿಸಿ ಕರಡು ಕ್ರಿಯಾ ಯೋಜನೆಯನ್ನು ಸಲ್ಲಿಸಬೇಕು. ಸಮಿತಿಯು ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಸಮಗ್ರ ಕ್ರಿಯಾ ಯೋಜನೆಯನ್ನು ವಾರ್ತಾ ಇಲಾಖೆಯ ನಿರ್ದೇಶಕರು ಅನುಷ್ಠಾನಗೊಳಿಸಬೇಕು.

ಈ ಜಾಹೀರಾತುಗಳ ಪ್ರಚಾರಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಇಲಾಖೆ/ಕಛೇರಿಗಳಿಂದ ಭರಿಸತಕ್ಕದ್ದು. ಜಾಹೀರಾತು ಪ್ರಕಟಿತ ಪತ್ರಿಕಾ ಸಂಚಿಕೆಗಳೊಂದಿಗೆ ಪರಿಶೀಲಿಸಿ ಬಿಲ್ಲುಗಳನ್ನು ವಾರ್ತಾ ಇಲಾಖೆಯ ನಿರ್ದೇಶನಾಲಯದ ವಾಣಿಜ್ಯ ಪ್ರಚಾರ ಶಾಖೆಯ ಉಪನಿರ್ದೇಶಕರ ದೃಢೀಕರಣದೊಂದಿಗೆ ಸಂಬಂಧಿಸಿದ ಇಲಾಖೆಗಳಿಗೆ ಕಳುಹಿಸತಕ್ಕದ್ದು.

22) **ರಾಜ್ಯ / ರಾಷ್ಟ್ರೀಯ ಹಬ್ಬ/ ದಿನಾಚರಣೆಗಳು :**

ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಕರ್ನಾಟಕ ರಾಜ್ಯೋತ್ಸವ, ಗಾಂಧೀ ಜಯಂತಿ ಹಾಗೂ ರಾಜ್ಯ ಸಮನ್ವಯ ಸಮಿತಿಯ ಅನುಮೋದಿತ ಸಂದರ್ಭಗಳಲ್ಲಿ ವಾರ್ತಾ ಇಲಾಖೆಯ ಮಾಧ್ಯಮ / ವಿಶೇಷ ಮಾಧ್ಯಮಪಟ್ಟಿಯಲ್ಲಿರುವ ದಿನಪತ್ರಿಕೆ ಮತ್ತು ನಿಯತಕಾಲಿಕೆಗಳಿಗೆ ವಾರ್ತಾ ಇಲಾಖೆಯ ನಿರ್ದೇಶಕರು ಜಾಹೀರಾತು ಬಿಡುಗಡೆ ಮಾಡಲು ಅಧಿಕಾರ ಹೊಂದಿರುತ್ತಾರೆ.

23) ವಿಶೇಷ / ಆಕಸ್ಮಿಕ ಸಂದರ್ಭಗಳು :

ರಾಜ್ಯಮಟ್ಟದ ವಿಶೇಷ ಸಭೆ ಸಮಾರಂಭಗಳು, ಜಯಂತಿ ಆಚರಣೆಗಳು ಸರ್ಕಾರದ ವಾರ್ಷಿಕ ದಿನಾಚರಣೆ, ಪ್ರಮುಖ ಯೋಜನೆಗಳ ಲೋಕಾರ್ಪಣೆ, ಇತ್ಯಾದಿ ಜಾಹೀರಾತುಗಳನ್ನು ಸರ್ಕಾರದ ಸೂಚನೆಯ ಮೇರೆಗೆ ಮಾಧ್ಯಮಪಟ್ಟಿಯಲ್ಲಿರುವ ರಾಜ್ಯಮಟ್ಟದ ದಿನಪತ್ರಿಕೆಗಳಿಗೆ ಹಾಗೂ 20,000 ಮತ್ತು ಹೆಚ್ಚು ಪ್ರತಿಗಳ ಪ್ರಸಾರ ಸಂಖ್ಯೆ ಹೊಂದಿರುವ ಪ್ರಾದೇಶಿಕ ದಿನ ಪತ್ರಿಕೆಗಳಿಗೆ ಆವರ್ತನೀಯ ವಿಧಾನವನ್ನು ಅನುಸರಿಸಿ ಬಿಡುಗಡೆ ಮಾಡಬೇಕು. ಈ ಕಾರ್ಯಕ್ರಮಗಳು ಜರುಗುವ ವ್ಯಾಪ್ತಿಯಲ್ಲಿನ ಪ್ರಾದೇಶಿಕ ದಿನ ಪತ್ರಿಕೆಗಳು ಮತ್ತು ಜಿಲ್ಲಾಮಟ್ಟದ ದಿನ ಪತ್ರಿಕೆಗಳು ಸಹ ಸಂದರ್ಭಾನುಸಾರ ವಾರ್ತಾ ಇಲಾಖೆಯ ನಿರ್ದೇಶಕರು ಜಾಹೀರಾತು ಬಿಡುಗಡೆ ಮಾಡಲು ಅಧಿಕಾರ ಹೊಂದಿರುತ್ತಾರೆ.

(ಮೇಲ್ಕಂಡ ಸಂದರ್ಭಗಳಲ್ಲಿ ರಾಜ್ಯ ಸಮನ್ವಯ ಸಮಿತಿಯ ಅನುಮೋದಿಸಿದ ಕ್ರಿಯಾ ಯೋಜನೆಯ ಮಿತಿಯಲ್ಲಿ ಹಾಗೂ ಸರ್ಕಾರದ ಸೂಚನೆಯ ಮೇರೆಗೆ ಅಂಗೀಕೃತ ಮಾಧ್ಯಮ ಪಟ್ಟಿಯಲ್ಲಿ ನಿಗದಿಪಡಿಸಿರುವ ದರಗಳಂತೆ ಜಾಹೀರಾತು ಬಿಡುಗಡೆ ಮಾಡಲು ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.)

ಟಿಪ್ಪಣಿ:

1. **ಸರ್ಕಾರದ ಎಲ್ಲಾ ಇಲಾಖೆಗಳು ಮತ್ತು ಅವುಗಳ ಅಧೀನಕ್ಕೊಳಪಡುವ ನಿಗಮ, ಮಂಡಳಿ, ಪ್ರಾಧಿಕಾರಗಳು, ಜಿಲ್ಲಾ ಪಂಚಾಯತ್ ಸಂಸ್ಥೆಗಳು, ಮಹಾನಗರ ಪಾಲಿಕೆಗಳು, ನಗರ ಪಾಲಿಕೆಗಳು, ನಗರ ಸಭೆ, ಪುರಸಭೆ ಇವುಗಳೆಲ್ಲವೂ ತಮ್ಮ ತಮ್ಮ ಕಾರ್ಯವ್ಯಾಪ್ತಿಗೆ ಸಂಬಂಧಪಟ್ಟಂತೆ ಸಾಂದರ್ಭಿಕವಾಗಿ ಬಿಡುಗಡೆ ಮಾಡಬೇಕಾಗುವ ಆಕರ್ಷಕ ಜಾಹೀರಾತುಗಳು ಮತ್ತು ವಿದ್ಯುನ್ಮಾನ ಮಾಧ್ಯಮದ ಜಾಹೀರಾತುಗಳ ಮಾಹಿತಿ ಮತ್ತು ಅವುಗಳ ಪ್ರಕಟಣೆಗಾಗಿ ತಗಲುವ ವೆಚ್ಚಕ್ಕೆ ಅನುದಾನದ ಪ್ರಾಯೋಜನೆಯೊಂದಿಗೆ ರೂಪಿಸಿಕೊಂಡ ಕ್ರಿಯಾ ಯೋಜನೆಯನ್ನು ರಾಜ್ಯಮಟ್ಟದ ಸಮನ್ವಯ ಸಮಿತಿಯ ಅನುಮೋದನೆಗಾಗಿ ವಾರ್ತಾ ಇಲಾಖೆಯ ನಿರ್ದೇಶಕರಿಗೆ ಪ್ರತಿ ವರ್ಷ ಮಾರ್ಚ್ ಮಾಹೆಯ ಅಂತ್ಯದೊಳಗೆ ಕಳುಹಿಸಿಕೊಡಬೇಕು.**
2. ಈ ಎಲ್ಲಾ ಇಲಾಖೆ/ಸಂಸ್ಥೆಗಳ ಅಗತ್ಯಕ್ಕನುಗುಣವಾಗಿ ವಾರ್ತಾ ಇಲಾಖೆಯ ನಿರ್ದೇಶಕರು ಜಾಹೀರಾತುಗಳ ಪ್ರಚಾರಾಂದೋಲನದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ರಾಜ್ಯಮಟ್ಟದ ಸಮನ್ವಯ ಸಮಿತಿಗೆ ಸಲ್ಲಿಸಿ, ಸಮಿತಿಯ ಅನುಮೋದನೆಯನ್ನು ಪ್ರತಿ ವರ್ಷ ಮಾರ್ಚ್ ಮಾಹೆಯಲ್ಲಿ ಪಡೆದುಕೊಳ್ಳಬೇಕು.
3. ಜಾಹೀರಾತುಗಳನ್ನು ಇಲಾಖೆಯ ಅಂಗೀಕೃತ ಪಟ್ಟಿಯಲ್ಲಿರುವ ಪತ್ರಿಕೆಗಳು ಮತ್ತು ವಿದ್ಯುನ್ಮಾನ ಮಾಧ್ಯಮದ ವಾಹಿನಿಗಳಲ್ಲಿ ಮಾತ್ರ ಬಿಡುಗಡೆ ಮಾಡಬೇಕು.
4. ಮಾಧ್ಯಮ ಪಟ್ಟಿಯಲ್ಲಿಲ್ಲದ ಪತ್ರಿಕೆಗಳಿಗೆ ಜಾಹೀರಾತು ಬಿಡುಗಡೆ ಮಾಡಲು ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಅಥವಾ ಮಾನ್ಯ ವಾರ್ತಾ ಸಚಿವರಿಂದ ಲಿಖಿತ ಸೂಚನೆ ಬಂದಲ್ಲಿ ಅದರಂತೆ ವಾರ್ತಾ ಇಲಾಖೆಯ ನಿರ್ದೇಶಕರು ಜಾಹೀರಾತು ಬಿಡುಗಡೆ ಮಾಡಿ ಘಟನೋತ್ತರ ಮಂಜೂರಾತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು.
5. ಸರ್ಕಾರದ ಎಲ್ಲಾ ಇಲಾಖೆಗಳು ಮತ್ತು ಅವುಗಳ ಅಧೀನದಲ್ಲಿ ಬರುವ ನಿಗಮ / ಮಂಡಳಿ/ ಪ್ರಾಧಿಕಾರ ಸ್ಥಳೀಯ ಸಂಸ್ಥೆಗಳು ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮ ಎಲ್ಲಾ ಜಾಹೀರಾತುಗಳನ್ನು ವಾರ್ತಾ ಇಲಾಖೆಗೆ ಕಳುಹಿಸಿಕೊಡಬೇಕು. ಎಲ್ಲಾ ಜಾಹೀರಾತುಗಳನ್ನು ಅಂತರ್ಜಾಲದ ಮುಖಾಂತರ ಕಳುಹಿಸಲು ಅನುವಾಗುವಂತೆ ವಾರ್ತಾ ಇಲಾಖೆಯು ಸೂಕ್ತ ತಂತ್ರಾಂಶವನ್ನು ಅಳವಡಿಸಿಕೊಂಡು ಎಲ್ಲಾ ಇಲಾಖೆಗಳೂ ಅವರವರ ಶಕ್ತಿಯಾನುಸಾರ ಉಪಯೋಗಿಸಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕು.
6. ಸರ್ಕಾರದ ಜಾಹೀರಾತು ಪ್ರಚಾರ ಕಾರ್ಯಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ಒಂದು ಪ್ರತ್ಯೇಕ ಲೆಕ್ಕಶೀರ್ಷಿಕೆಯನ್ನು ಗೊತ್ತುಪಡಿಸಿ ಸಂಪೂರ್ಣ ಅನುದಾನವನ್ನು ಆ ಶೀರ್ಷಿಕೆಯಡಿ ಹಂಚಿಕೆ ಮಾಡಬೇಕು.
7. ಮೆ॥ ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ & ಏಜೆನ್ಸೀಸ್ ಸಂಸ್ಥೆಯು ಜಾಹೀರಾತು ನಿರ್ವಹಣೆ ಮಾಡುವ ತನ್ನ ಸಾಮರ್ಥ್ಯದ ಬಗ್ಗೆ ಮುಂಚಿತವಾಗಿ ಮೂಲ ಸೌಲಭ್ಯ ಹಾಗೂ ಸಿಬ್ಬಂದಿಗಳ ಕುರಿತು ಇಲಾಖೆಗೆ ಸಂಪೂರ್ಣ ಮಾಹಿತಿ ಒದಗಿಸಬೇಕು.
8. ವಾರ್ತಾ ಇಲಾಖೆಯು ಜಾಹೀರಾತುಗಳನ್ನು ಮೆ: ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ & ಏಜೆನ್ಸೀಸ್ ಸಂಸ್ಥೆಯ ಸಾಮರ್ಥ್ಯಕ್ಕೆ ತಕ್ಕಂತೆ ವಹಿಸಬೇಕು.
9. ಮೆ: ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ & ಏಜೆನ್ಸೀಸ್ ಸಂಸ್ಥೆಯ ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ಮೀರಿ ಬರುವ ಎಲ್ಲಾ ಜಾಹೀರಾತುಗಳನ್ನು ಅಂಗೀಕೃತ ಪಟ್ಟಿಯಲ್ಲಿರುವ ಇತರ ಜಾಹೀರಾತು ಸಂಸ್ಥೆಗಳ ಮುಖಾಂತರ ಆವರ್ತನೀಯ ವಿಧಾನ ಅನುಸರಿಸಿ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು.
10. ಜಾಹೀರಾತನ್ನು ಮೆ। ಎಂಸಿ&ಎ ಅಥವಾ ಇತರೆ ಸಂಸ್ಥೆಗೆ ಒದಗಿಸಿದ ಆದೇಶವನ್ನು ಸಹ ವಾರ್ತಾ ಇಲಾಖೆಯು ತನ್ನ Portal ಮುಖಾಂತರವೇ ಮಾಡುವುದು ಹಾಗೂ Terms of Payment etc ಅದೇ ಆದೇಶದಲ್ಲಿ ಸೇರಿಸಿ, ಸಂಬಂಧಪಟ್ಟ ಇಲಾಖೆ/ಸಂಸ್ಥೆಗೂ ಅಂತರ್ಜಾಲದ ಮುಖಾಂತರವೇ ಕಳುಹಿಸುವುದು.

11. ಅದರಂತೆ ಜಾಹೀರಾತು ಸಂಸ್ಥೆಯು ಸೂಕ್ತ ದಾಖಲೆಗಳೊಂದಿಗೆ ಬಿಲ್ಲುಗಳನ್ನು ನೇರವಾಗಿ ಸಂಬಂಧಿಸಿದ ಇಲಾಖೆಗೆ ಸಲ್ಲಿಸಬೇಕು ಹಾಗೂ ಆಯಾ ಇಲಾಖೆಯು ವಾರ್ತಾ ಇಲಾಖೆ ನೀಡಿರುವ ಕಾರ್ಯಾದೇಶದ ಜೊತೆಗೆ ನೀಡಿರುವ Terms of Payment ಪ್ರಕಾರ ಸಂದಾಯ ಮಾಡುವುದು.
12. ಅಂಗೀಕೃತ ಜಾಹೀರಾತು ಸಂಸ್ಥೆಯ ಆವರ್ತನೀಯ ಪಟ್ಟಿಯನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ವಾರ್ತಾ ಇಲಾಖೆಯು ಸೂಕ್ತ ಮಾನದಂಡಗಳನ್ನು ರೂಪಿಸಬೇಕು.
13. ವಾರ್ತಾ ಇಲಾಖೆಯು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಿಸಿದಂತೆ ಬಿಡುಗಡೆ ಮಾಡುವ ಜಾಹೀರಾತುಗಳ ಬಗ್ಗೆ ಅವುಗಳ ವಿಷಯ ವ್ಯಾಪ್ತಿ, ಪ್ರಸಾರ ವ್ಯಾಪ್ತಿ ಮತ್ತು ವಿಸ್ತೀರ್ಣ ಅಂಶಗಳನ್ನು ಪೂರ್ವಭಾವಿಯಾಗಿ ನಿರ್ಧರಿಸಿಟ್ಟುಕೊಳ್ಳಬೇಕು.

24) ಸ್ಮರಣ ಸಂಚಿಕೆ / ವಿಶೇಷ ಸಂಚಿಕೆಗಳಿಗೆ ಜಾಹೀರಾತು ಬಿಡುಗಡೆ ಮಾಡಲು ಮಾರ್ಗಸೂಚಿಗಳು

ಸ್ಮರಣ ಸಂಚಿಕೆ ಮತ್ತು ವಿಶೇಷ ಸಂಚಿಕೆಗಳಿಗೆ ಕಾಲಕಾಲಕ್ಕೆ ಸರ್ಕಾರವು ಆದೇಶದ ಮೂಲಕ ನಿಗದಿಪಡಿಸುವ ಮೊತ್ತದಲ್ಲಿ ಹಾಗೂ ಆಯಾ ವರ್ಷದ ಕ್ರಿಯಾ ಯೋಜನೆಯ ಮಿತಿಯಲ್ಲಿ ಜಾಹೀರಾತು ನೀಡಲು ವಾರ್ತಾ ಇಲಾಖೆಯ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.

25) ಜಾಹೀರಾತು ಪಡೆಯಲು ಅರ್ಹ ಸಂಸ್ಥೆಗಳು ಮತ್ತು ವ್ಯಕ್ತಿಗಳು :

1. ರಾಜ್ಯ ಮತ್ತು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳು
2. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತಿಯ ಸರ್ಕಾರೇತರ ಸಂಸ್ಥೆಗಳು ಹಾಗೂ ಪ್ರಶಸ್ತಿ ಪುರಸ್ಕೃತ ಸಂಘ ಸಂಸ್ಥೆಗಳು, ಕಾರ್ಮಿಕ ಸಂಘಟನೆಗಳು, ಶೈಕ್ಷಣಿಕ ಸಂಸ್ಥೆಗಳು.
3. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರಿಗೆ ಸೇರಿದ ಸಂಘ ಸಂಸ್ಥೆಗಳು.
4. ಮಾಧ್ಯಮ ವಲಯಗಳು (ಪತ್ರಿಕಾ ಮತ್ತು ವಿದ್ಯುನ್ಮಾನ).
5. ಕಲಾವಿದರು ಮತ್ತು ಕಲಾವಿದರ ಸಂಘ ಸಂಸ್ಥೆಗಳು (ನೃತ್ಯ, ನಾಟಕ, ಸಂಗೀತ, ಜಾನಪದ, ಯಕ್ಷಗಾನ, ಚಲನಚಿತ್ರ ಇತ್ಯಾದಿ).
6. ಸಮಾಜ ಸೇವಾ, ವಿಜ್ಞಾನ, ಸಾಹಿತ್ಯ ಮತ್ತು ಸಂಸ್ಕೃತಿ, ಕ್ರೀಡಾ ಕ್ಷೇತ್ರದ ಸಂಘ ಸಂಸ್ಥೆಗಳು, ಪರಿಣಿತರು ಮತ್ತು ಪ್ರತಿಭಾನ್ವಿತರು.

26) ಸ್ಮರಣ ಸಂಚಿಕೆ/ವಿಶೇಷ ಸಂಚಿಕೆ ಕುರಿತ ಜಾಹೀರಾತು ಮೊತ್ತದ ವಿವರಗಳು :

1. ನಿರ್ದೇಶಕರು ಒಂದು ಆರ್ಥಿಕ ವರ್ಷದಲ್ಲಿ ಒಂದು ಸಂಸ್ಥೆಗೆ ಗರಿಷ್ಠ 2 ಬಾರಿ ಜಾಹೀರಾತು ನೀಡಲು ಅಧಿಕಾರ ಹೊಂದಿರುತ್ತಾರೆ.
2. ಒಂದು ಸಂಸ್ಥೆಗೆ ಒಂದು ಆರ್ಥಿಕ ವರ್ಷದಲ್ಲಿ ಒಟ್ಟಾರೆ ಜಾಹೀರಾತು ಮೊತ್ತ ಗರಿಷ್ಠ ರೂ.50,000/- ಗಳಿಗೆ ಸೀಮಿತವಾಗಿರಬೇಕು.
3. ಈ ಎಲ್ಲಾ ಸ್ಮರಣ/ವಿಶೇಷ ಸಂಚಿಕೆಗಳ ಜಾಹೀರಾತು ಮೊತ್ತ ಪ್ರತಿ ಆರ್ಥಿಕ ವರ್ಷದಲ್ಲಿ ಗರಿಷ್ಠ ರೂ. 50.00 ಲಕ್ಷ ಮೀರಬಾರದು.

ಟಿಪ್ಪಣಿ:

1. ಸ್ಮರಣ ಸಂಚಿಕೆ/ವಿಶೇಷ ಸಂಚಿಕೆ ಸಾಮಾನ್ಯ ಸಂಚಿಕೆಗಿಂತ ಭಿನ್ನವಾಗಿರಬೇಕು.
2. ಪತ್ರಿಕೆಗಳು ಈ ಸೌಲಭ್ಯ ಪಡೆಯಲು ಪ್ರತ್ಯೇಕವಾಗಿ (ಸಾಮಾನ್ಯ ಸಂಚಿಕೆ ಹೊರತುಪಡಿಸಿ) ಸ್ಮರಣ/ವಿಶೇಷ ಸಂಚಿಕೆ ಪ್ರಕಟಿಸತಕ್ಕದ್ದು.
3. ಸಂಚಿಕೆಗಳು ಜನಜಾಗೃತಿಯುಳ್ಳ ಬಹು ವಿಷಯಗಳನ್ನೊಳಗೊಂಡ ಶೇ.60 ರಷ್ಟು ಲೇಖನಗಳನ್ನು ಒಳಗೊಂಡಿರಬೇಕು.
4. ಮೇಲ್ಕಂಡ ಅಂಶಗಳನ್ನು ಪಾಲಿಸದೇ ಇಲಾಖೆಯ ಜಾಹೀರಾತು ಪ್ರಕಟಿಸುವ ಸ್ಮರಣ ಸಂಚಿಕೆ / ವಿಶೇಷ ಸಂಚಿಕೆಗಳಿಗೆ ಜಾಹೀರಾತಿನ ಮೊತ್ತದಲ್ಲಿ ಗರಿಷ್ಠ ಅರ್ಧದಷ್ಟು ಮೊತ್ತವನ್ನು ಕಡಿತಗೊಳಿಸತಕ್ಕದ್ದು.

27) ಸರ್ಕಾರದ ಜಾಹೀರಾತು ಪ್ರಕಟಣೆ : ಮಾರ್ಗಸೂಚಿ ಸಮನ್ವಯ ಸಮಿತಿ

ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳು ಮತ್ತು ಅವುಗಳ ಅಧೀನದಲ್ಲಿ ಬರುವ ನಿಗಮ, ಮಂಡಳಿ, ಪ್ರಾಧಿಕಾರ, ಸ್ಥಳೀಯ ಸಂಸ್ಥೆಗಳನ್ನು (ಪಂಚಾಯತ್‌ರಾಜ್, ಪಾಲಿಕೆ, ನಗರಸಭೆ, ಪುರಸಭೆ) ಹೊಸ ಜಾಹೀರಾತು ನೀತಿಯ ವ್ಯಾಪ್ತಿಗೆ ಒಳಪಡಿಸಿ ಅವುಗಳ ಜಾಹೀರಾತುಗಳನ್ನು ವಾರ್ತಾ ಇಲಾಖೆಯ ಮುಖಾಂತರವೇ ಒಂದು ವ್ಯವಸ್ಥಿತ ರೀತಿಯಲ್ಲೇ ಪ್ರಚಾರ ಕಾರ್ಯ ಕೈಗೊಳ್ಳಲು ಈ ಕೆಳಕಂಡಂತೆ ರಾಜ್ಯಮಟ್ಟದ ಸಮನ್ವಯ ಸಮಿತಿ ರಚಿಸಲಾಗಿದೆ.

1. ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, (ಅಭಿವೃದ್ಧಿ ಆಯುಕ್ತರು) – ಅಧ್ಯಕ್ಷರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ – ಸದಸ್ಯರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕನ್ನಡ, ಸಂಸ್ಕೃತಿ, ವಾರ್ತಾ ಇಲಾಖೆ – ಸದಸ್ಯರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ – ಸದಸ್ಯರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ – ಸದಸ್ಯರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ – ಸದಸ್ಯರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ – ಸದಸ್ಯರು
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ – ಸದಸ್ಯರು
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ – ಸದಸ್ಯರು
10. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ – ಸದಸ್ಯರು
11. ನಿರ್ದೇಶಕರು, ವಾರ್ತಾ ಇಲಾಖೆ – ಸದಸ್ಯ ಕಾರ್ಯದರ್ಶಿಗಳು

ಮೇಲ್ಕಂಡ ಸಮಿತಿಗೆ ಸರ್ಕಾರದ ಎಲ್ಲ ಇಲಾಖೆಗಳೂ ತಮ್ಮ ತಮ್ಮ ಕಾರ್ಯ ವ್ಯಾಪ್ತಿಗೆ ಸಂಬಂಧಪಟ್ಟಂತೆ ಪ್ರತಿ ವರ್ಷ ವಿವಿಧ ಸಾಂಪ್ರದಾಯಿಕ ಸಂದರ್ಭಗಳಲ್ಲಿ ಪ್ರಕಟಿಸಬೇಕಾದ ಪತ್ರಿಕಾ ಜಾಹೀರಾತು/ ವಿದ್ಯುನ್ಮಾನ ಜಾಹೀರಾತುಗಳ ಕ್ರಿಯಾ ಯೋಜನೆಯನ್ನು ಪ್ರತಿ ವರ್ಷ ಜನವರಿ ಮಾಹೆಯಲ್ಲಿ ಮುಂದಿನ ಆರ್ಥಿಕ ವರ್ಷಕ್ಕೆ ಅನ್ವಯಿಸಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳ ಮೂಲಕ ಕಳುಹಿಸಿಕೊಡಬೇಕು. **ಈ ಜಾಹೀರಾತುಗಳ ವೆಚ್ಚವನ್ನು ಆಯಾ ಇಲಾಖೆಗಳೇ ಭರಿಸಬೇಕು.**

ಮೇಲ್ಕಂಡ ಪೂರ್ವನಿಗದಿತ ಸಂದರ್ಭಗಳನ್ನು ಹೊರತುಪಡಿಸಿ ಕೆಲವು ಅನಿರೀಕ್ಷಿತ ಮತ್ತು ತುರ್ತು ಸಂದರ್ಭಗಳಲ್ಲಿ ಜಾಹೀರಾತು ಪ್ರಕಟಿಸುವ ಅಗತ್ಯತೆ ಉಂಟಾದಾಗ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ನಿರ್ದೇಶಕರು, ವಾರ್ತಾ ಇಲಾಖೆ ಇವರನ್ನು ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರು ಸಂಪರ್ಕಿಸಿ ಒಪ್ಪಿಗೆ ಪಡೆದುಕೊಂಡು ಪ್ರಕಟಣೆಗೆ ಕ್ರಮಕೈಗೊಳ್ಳಬಹುದಾಗಿದೆ.

28) ಪರಿಶಿಷ್ಟ ಜಾತಿ / ಪಂಗಡದವರ ಪತ್ರಿಕೆಗಳಿಗೆ ಜಾಹೀರಾತು ಬಿಡುಗಡೆ :

ವಾರ್ತಾ ಇಲಾಖೆಯ ಮಾಧ್ಯಮಪಟ್ಟಿಯಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಮಾಲೀಕತ್ವದ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳು ಹಾಗೂ ನಿಯತಕಾಲಿಕಗಳಿಗೆ ಸರ್ಕಾರದ ಪ್ರೋತ್ಸಾಹ ರೂಪದಲ್ಲಿ ಆಯಾ ಪತ್ರಿಕೆಗಳ ಅಂಗೀಕೃತ ದರದಲ್ಲಿ ಪ್ರತಿ ತಿಂಗಳು ಕೆಳಕಂಡ ಷರತ್ತು ಮತ್ತು ವಿಧಾನದಂತೆ ಜಾಹೀರಾತು ಬಿಡುಗಡೆ ಮಾಡಬೇಕು.

1. ಪತ್ರಿಕೆಯ ಮಾಲೀಕತ್ವ ಮತ್ತು ಸಂಪಾದಕತ್ವವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಹೊಂದಿರಬೇಕು. ಈ ಬಗ್ಗೆ ಅಧಿಕೃತ ಪ್ರಾಧಿಕಾರದಿಂದ ಜಾತಿ ಪ್ರಮಾಣಪತ್ರ ಪಡೆದು ಸಲ್ಲಿಸಬೇಕು.
2. ದಿನ ಪತ್ರಿಕೆಗಳಿಗೆ ಪ್ರತಿ ತಿಂಗಳು ಕನಿಷ್ಟ 1 ಪುಟ ಜಾಹೀರಾತು.
3. ವಾರ ಪತ್ರಿಕೆಗಳಿಗೆ ಪ್ರತಿ ವಾರ ಕನಿಷ್ಟ 1 ಪುಟ ಜಾಹೀರಾತು.
4. ಪಾಕ್ಷಿಕ ಪತ್ರಿಕೆಗಳಿಗೆ ಪ್ರತಿ ಸಂಚಿಕೆಗೆ ಕನಿಷ್ಟ 1 ಪುಟ ಜಾಹೀರಾತು.
5. ಮಾಸ ಪತ್ರಿಕೆಗಳಿಗೆ ಪ್ರತಿ ಸಂಚಿಕೆಗೆ ಕನಿಷ್ಟ 1 ಪುಟ ಜಾಹೀರಾತು.
6. ದ್ವೈ ಮಾಸಿಕ ಪತ್ರಿಕೆಗಳಿಗೆ ಪ್ರತಿ ಸಂಚಿಕೆಗೆ ಕನಿಷ್ಟ 1 ಪುಟ ಜಾಹೀರಾತು.
7. ತ್ರೈ ಮಾಸಿಕ ಪತ್ರಿಕೆಗಳಿಗೆ ಪ್ರತಿ ಸಂಚಿಕೆಗೆ ಕನಿಷ್ಟ 1 ಪುಟ ಜಾಹೀರಾತು.

ಟಿಪ್ಪಣಿ:

1. ಪತ್ರಿಕೆಯ ಮಾಲೀಕರು ಮತ್ತು ಸಂಪಾದಕರು ಸಲ್ಲಿಸುವ ಜಾತಿ ಪ್ರಮಾಣಪತ್ರವನ್ನು ಪರಿಶೀಲಿಸಿ ಪ್ರತಿ ಮಾಹೆ ಜಾಹೀರಾತು ಬಿಡುಗಡೆ ಮಾಡುವ ಅಧಿಕಾರವನ್ನು ವಾರ್ತಾ ಇಲಾಖೆಯ ನಿರ್ದೇಶಕರಿಗೆ ಪ್ರತ್ಯಾಯೋಜಿಸಿದೆ.
2. ಒಬ್ಬ ವ್ಯಕ್ತಿಯೇ ಬೇರೆ ಬೇರೆ ನಿಯತಕಾಲಿಕ ಅವಧಿಯ ಎರಡು ಪತ್ರಿಕೆಗಳನ್ನು ಪ್ರಕಟಿಸುತ್ತಿದ್ದಲ್ಲಿ ಆ ಎರಡು ಪತ್ರಿಕೆಗಳು ಈ ವಿಶೇಷ ಜಾಹೀರಾತು ಸೌಲಭ್ಯಕ್ಕೆ ಅರ್ಹವಾಗಿರುತ್ತವೆ. (ಉದಾ: ಬೇರೆ ಬೇರೆ ಹೆಸರಿನ ದಿನ ಪತ್ರಿಕೆ ವಾರ/ಪಾಕ್ಷಿಕ/ಮಾಸಪತ್ರಿಕೆ)

29) <u>ಗಡಿ ಭಾಗದ ಪತ್ರಿಕೆಗಳಿಗೆ ಜಾಹೀರಾತು ಬಿಡುಗಡೆ :</u>

ಗಡಿ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ (THE KARNATAKA BORDER AREA DEVELOPMENT AUTHORITY ACT, 2010ರ SCHEDULE (See Clause (b) of Section 2 ರ ರೀತ್ಯ) ಬರುವ 52 ತಾಲ್ಲೂಕುಗಳಲ್ಲಿ ಪ್ರಕಟವಾಗುವ ದಿನ ಪತ್ರಿಕೆ ಮತ್ತು ನಿಯತಕಾಲಿಕಗಳು ವಿಶೇಷ ಜಾಹೀರಾತು ಸೌಲಭ್ಯ ಪಡೆಯಲು ಅರ್ಹತೆ ಹೊಂದಿರುತ್ತವೆ.

ಗಡಿ ಭಾಗದ ತಾಲ್ಲೂಕುಗಳ ವಿವರ

ಕ್ರ.ಸಂ	ತಾಲ್ಲೂಕು ಹಾಗೂ ಜಿಲ್ಲೆ ಹೆಸರು	ಕ್ರ.ಸಂ	ತಾಲ್ಲೂಕು ಹಾಗೂ ಜಿಲ್ಲೆ ಹೆಸರು
1	ಆನೇಕಲ್ (ಬೆಂಗಳೂರು ಗ್ರಾಮಾಂತರ)	2	ಹೊಸಕೋಟೆ (ಬೆಂಗಳೂರು ಗ್ರಾಮಾಂತರ)
3	ಕನಕಪುರ (ಬೆಂಗಳೂರು ಗ್ರಾಮಾಂತರ)	4	ಚಳ್ಳಕೆರೆ (ಚಿತ್ರದುರ್ಗ)
5	ಹಿರಿಯೂರು (ಚಿತ್ರದುರ್ಗ)	6	ಮೊಳಕಾಲ್ಮೂರು (ಚಿತ್ರದುರ್ಗ)
7	ಬಾಗೇಪಲ್ಲಿ (ಚಿಕ್ಕಬಳ್ಳಾಪುರ)	8	ಬಂಗಾರಪೇಟೆ (ಕೋಲಾರ)
9	ಚಿಂತಾಮಣಿ (ಚಿಕ್ಕಬಳ್ಳಾಪುರ)	10	ಗೌರಿಬಿದನೂರು (ಚಿಕ್ಕಬಳ್ಳಾಪುರ)
11	ಗುಡಿಬಂಡೆ (ಚಿಕ್ಕಬಳ್ಳಾಪುರ)	12	ಮಾಲೂರು (ಕೋಲಾರ)
13	ಮುಳಬಾಗಿಲು (ಕೋಲಾರ)	14	ಶ್ರೀನಿವಾಸಪುರ (ಕೋಲಾರ)
15	ಮಧುಗಿರಿ (ತುಮಕೂರು)	16	ಪಾವಗಡ (ತುಮಕೂರು)
17	ಶಿರಾ (ತುಮಕೂರು)	18	ಬಂಟ್ವಾಳ (ದಕ್ಷಿಣ ಕನ್ನಡ)
19	ಮಂಗಳೂರು (ದಕ್ಷಿಣ ಕನ್ನಡ)	20	ಪುತ್ತೂರು (ದಕ್ಷಿಣ ಕನ್ನಡ)
21	ಸುಳ್ಯ (ದಕ್ಷಿಣ ಕನ್ನಡ)	22	ಮಡಿಕೇರಿ (ಕೊಡಗು)
23	ವೀರಾಜಪೇಟೆ (ಕೊಡಗು)	24	ಚಾಮರಾಜನಗರ (ಚಾಮರಾಜನಗರ)
25	ಗುಂಡ್ಲುಪೇಟೆ (ಚಾಮರಾಜನಗರ)	26	ಹೆಗ್ಗಡದೇವನಕೋಟೆ (ಮೈಸೂರು)
27	ಕೊಳ್ಳೇಗಾಲ (ಚಾಮರಾಜನಗರ)	28	ಬಿಜಾಪುರ (ಬಿಜಾಪುರ)
29	ಇಂಡಿ (ಬಿಜಾಪುರ)	30	ಬಳ್ಳಾರಿ (ಬಳ್ಳಾರಿ)
31	ಸಂಡೂರು (ಬಳ್ಳಾರಿ)	32	ಸಿರಗುಪ್ಪ (ಬಳ್ಳಾರಿ)
33	ಅಫ್ಜಲ್‌ಪುರ (ಗುಲ್ಬರ್ಗಾ)	34	ಆಳಂದ (ಗುಲ್ಬರ್ಗಾ)
35	ಚಿಂಚೋಳಿ (ಗುಲ್ಬರ್ಗಾ)	36	ಸೇಡಂ (ಗುಲ್ಬರ್ಗಾ)
37	ಶಹಾಪೂರ (ಯಾದಗಿರಿ)	38	ಯಾದಗಿರಿ (ಯಾದಗಿರಿ)
39	ಮಾನ್ವಿ (ರಾಯಚೂರು)	40	ರಾಯಚೂರು (ರಾಯಚೂರು)
41	ಅಥಣಿ (ಬೆಳಗಾವಿ)	42	ಬೆಳಗಾವಿ (ಬೆಳಗಾವಿ)
43	ಹುಕ್ಕೇರಿ (ಬೆಳಗಾವಿ)	44	ಚಿಕ್ಕೋಡಿ (ಬೆಳಗಾವಿ)
45	ಖಾನಾಪೂರ (ಬೆಳಗಾವಿ)	46	ಕಾರವಾರ (ಉತ್ತರಕನ್ನಡ)
47	ಜೋಯಿಡಾ (ಉತ್ತರಕನ್ನಡ)	48	ಔರಾದ್ (ಬೀದರ್)
49	ಬಸವಕಲ್ಯಾಣ (ಬೀದರ್)	50	ಭಾಲ್ಕಿ (ಬೀದರ್)
51	ಬೀದರ್ (ಬೀದರ್)	52	ಹುಮ್ನಾಬಾದ್ (ಬೀದರ್)

1) **ಅರ್ಹತೆಗಳು:**

1. ಪತ್ರಿಕೆಯು ಇಲಾಖೆಯ ಮಾಧ್ಯಮಪಟ್ಟಿಗೆ ಸೇರಿರಬೇಕು.
2. ಪತ್ರಿಕೆಯು ಸತತವಾಗಿ 10 ವರ್ಷಗಳ ಪ್ರಕಟಣಾ ಅವಧಿಯನ್ನು ಪೂರೈಸಿರಬೇಕು. ಈ ಬಗ್ಗೆ ಪತ್ರಿಕೆಯ ಪ್ರಕಟಣೆಯನ್ನು ಆರಂಭಿಸುವಾಗ ಜಿಲ್ಲಾಧಿಕಾರಿಗಳು / ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು ಅಥವಾ ಅವರಿಂದ ಅಧಿಕಾರ ಪಡೆದಿರುವ ಅಪರ ಜಿಲ್ಲಾಧಿಕಾರಿ/ಉಪವಿಭಾಗಾಧಿಕಾರಿ ಅವರಿಗೆ ಸಲ್ಲಿಸಿರುವ ನಮೂನೆ-1ರ ಘೋಷಣಾ ಪತ್ರದಲ್ಲಿ ಸಹಿ ಮಾಡಿದ ದಿನಾಂಕ ಮತ್ತು ಅಂದಿನ ಸಂಚಿಕೆಯನ್ನು ಪ್ರಥಮ (ಆರಂಭದ ದಿನ) ಸಂಚಿಕೆ ಎಂದು ಪರಿಗಣಿಸಬೇಕು.
3. ಪತ್ರಿಕೆಯು ಗಡಿ ತಾಲ್ಲೂಕುಗಳೆಂದು ಗುರುತಿಸಲ್ಪಡುವ ತಾಲ್ಲೂಕು ಕೇಂದ್ರ ಅಥವಾ ತಾಲ್ಲೂಕು ವ್ಯಾಪ್ತಿಯ ಪ್ರದೇಶದಲ್ಲಿ ಪ್ರಕಟವಾಗುತ್ತಿರಬೇಕು.
4. ಪತ್ರಿಕೆಗಳು ಕನ್ನಡ ಅಥವಾ ಸೋದರ ಭಾಷೆಗಳಾದ ತುಳು, ಕೊಂಕಣಿ, ಕೊಡವ, ಬಂಜಾರ ಮತ್ತು ಬ್ಯಾರಿ ಭಾಷೆಯಲ್ಲಿ ಪ್ರಕಟವಾಗುತ್ತಿರಬೇಕು.
5. ಅಂಗೀಕೃತ ಗಡಿಭಾಗದ ಪತ್ರಿಕೆಗಳಿಗೆ ಅಂಗೀಕೃತ ಜಾಹೀರಾತು ದರದಲ್ಲಿ ಪ್ರತಿ ತಿಂಗಳು 1 ಪುಟ ವಿಶೇಷ ಜಾಹೀರಾತು ಬಿಡುಗಡೆ ಮಾಡಬೇಕು. ಇದರೊಂದಿಗೆ ಸಾಮಾನ್ಯ ವರ್ಗದ ಪತ್ರಿಕೆಗಳಿಗೆ ಸಾಂದರ್ಭಿಕವಾಗಿ ಬಿಡುಗಡೆ ಮಾಡುವ ಆಕರ್ಷಕ ಜಾಹೀರಾತುಗಳನ್ನು, ಟೆಂಡರ್ ಮತ್ತು ವರ್ಗೀಕೃತ ಜಾಹೀರಾತುಗಳನ್ನು ಈ ಪತ್ರಿಕೆಗಳಿಗೆ ಬಿಡುಗಡೆ ಮಾಡಬೇಕು.
6. ಇತರೆ ಭಾಷೆಗಳಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳನ್ನು ಸರ್ಕಾರದ ಪೂರ್ವಾನುಮತಿಯೊಂದಿಗೆ ಗಡಿಭಾಗದ ಪತ್ರಿಕೆಗಳ ಪಟ್ಟಿಗೆ ವಾರ್ತಾ ಇಲಾಖೆ ಸೇರ್ಪಡೆ ಮಾಡಿಕೊಳ್ಳತಕ್ಕದ್ದು.
7. ಗಡಿಭಾಗದ ಪತ್ರಿಕೆಗಳು ಪ್ರಕಟಿತ ಸುದ್ದಿಯಲ್ಲಿ ಕನಿಷ್ಠ ಶೇ.20 ರಷ್ಟು ಸ್ಥಳೀಯ ಸುದ್ದಿಗಳನ್ನು ಪ್ರಕಟಿಸತಕ್ಕದ್ದು.

ಟಿಪ್ಪಣಿ:

1. ಪತ್ರಿಕೆಯು ಸತತವಾಗಿ 10 ವರ್ಷ ಪೂರೈಸಿರುವ ಬಗ್ಗೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಮಾಧ್ಯಮ ಸಮಿತಿಯ ವರದಿ ಪಡೆದು ಗಡಿಭಾಗದ ಪತ್ರಿಕೆಗಳೆಂದು ಪರಿಗಣಿಸಿ ಪ್ರತಿ ಮಾಹೆ ಜಾಹೀರಾತು ಬಿಡುಗಡೆ ಮಾಡುವ ಅಧಿಕಾರವನ್ನು ವಾರ್ತಾ ಇಲಾಖೆಯ ನಿರ್ದೇಶಕರಿಗೆ ಪ್ರತ್ಯಾಯೋಜಿಸಿದೆ.
2. ಒಂದು ಪತ್ರಿಕೆಯು ಎರಡು ಬೇರೆ ಬೇರೆ ಪರಿವ್ಯಾಪ್ತಿಯಲ್ಲಿ ವಿಶೇಷ ಜಾಹೀರಾತು ಸೌಲಭ್ಯಕ್ಕೆ ಅರ್ಹವಾಗಿದ್ದರೆ ಆ ಸೌಲಭ್ಯವನ್ನು ಮಂಜೂರು ಮಾಡಬೇಕು. ಉದಾ: ಮಾಧ್ಯಮ ಪಟ್ಟಿಯಲ್ಲಿರುವ ಗಡಿ ಭಾಗದ ಪತ್ರಿಕೆಯು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಮಾಲೀಕತ್ವ ಮತ್ತು ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದಲ್ಲಿ ಆ ಪತ್ರಿಕೆಯು ಗಡಿ ಭಾಗದ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿಶೇಷ ಜಾಹೀರಾತುಗಳೆರಡಕ್ಕೂ ಅರ್ಹವಾಗುತ್ತದೆ.

30) **ಪ್ರಾಯೋಜಿತ ಪುರವಣಿಗಳು:**

ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳು (ವಾರ, ಪಾಕ್ಷಿಕ, ಮಾಸಿಕ) ಒಂದು ನಿರ್ದಿಷ್ಟ ವಿಷಯ ಅಥವಾ ಸಂದರ್ಭದಲ್ಲಿ ಆ ಉದ್ದೇಶಕ್ಕನುಗುಣವಾಗಿ ವಿಶೇಷ ಪುರವಣಿ : ವಿಶೇಷ ಸಂಚಿಕೆ ಪ್ರಕಟಿಸಲಿಚ್ಛಿಸಿ ಮನವಿ ಸಲ್ಲಿಸಿದಾಗ ಅಥವಾ ಸರ್ಕಾರವೇ ಅಗತ್ಯಕ್ಕನುಗುಣವಾಗಿ ಅಂತಹ ಒಂದು ವಿಶೇಷ ಪುರವಣಿ ವಿಶೇಷ ಸಂಚಿಕೆ ಅಗತ್ಯವೆಂದು ಪರಿಗಣಿಸಿದಲ್ಲಿ ವಾರ್ತಾ ಇಲಾಖೆಯು ಸರ್ಕಾರದ ಪರವಾಗಿ ಅಂತಹ ವಿಶೇಷ ಪುರವಣಿ : ವಿಶೇಷ ಸಂಚಿಕೆಗೆ ಕೆಳಕಂಡ ಷರತ್ತಿಗೊಳಪಟ್ಟು ಪ್ರಾಯೋಜಿಸಬಹುದು.

1. ವಿಶೇಷ ಪುರವಣಿ : ವಿಶೇಷ ಸಂಚಿಕೆಯು ಆಯಾ ಪತ್ರಿಕೆಗಳ ಸಾಮಾನ್ಯ ಆಕಾರದಲ್ಲಿ ಕನಿಷ್ಠ 4 ಪುಟಗಳನ್ನು ಹೊಂದಿರಬೇಕು.
2. ಪ್ರಾಯೋಜನೆಯ ವೆಚ್ಚದ ಮೊತ್ತವು ವಿಶೇಷ ಪುರವಣಿ: ವಿಶೇಷ ಸಂಚಿಕೆಯ ಆಕಾರದ ಗರಿಷ್ಠ ಶೇಕಡಾ 60ರ ಪ್ರಮಾಣವನ್ನು ಮೀರಬಾರದು.
3. ವೆಚ್ಚದ ಮೊತ್ತವನ್ನು ಲೆಕ್ಕಹಾಕುವಾಗ ಕೆಳಕಂಡ ವಿಧಾನವನ್ನು ಅನುಸರಿಸಬೇಕು.
   ಅ) ಇಲಾಖೆಯ ಅಂಗೀಕೃತ ಮಾಧ್ಯಮಪಟ್ಟಿಯಲ್ಲಿರುವ ಪತ್ರಿಕೆಗಳಿಗೆ ಅವುಗಳ ಅಂಗೀಕೃತ ಜಾಹೀರಾತು ದರ ಅನ್ವಯಿಸಬೇಕು.

   ಆ) ಇಲಾಖೆಯ ಅಂಗೀಕೃತ ಮಾಧ್ಯಮಪಟ್ಟಿಯಲ್ಲಿ ಇಲ್ಲದ ಪತ್ರಿಕೆಗಳಿಗೆ ಕೇಂದ್ರ ಸರ್ಕಾರದ ಡಿ.ಎ.ವಿ.ಪಿ ನಿಗದಿಪಡಿಸಿದ ದರ ಅಥವಾ ವಾರ್ತಾ ಇಲಾಖೆಯ ಅಂಗೀಕೃತ ಪತ್ರಿಕೆಗಳಿಗೆ ಜಾಹೀರಾತು ದರ ನಿಗದಿಪಡಿಸಲು ಅನುಸರಿಸುತ್ತಿರುವ ವಿಧಾನದಂತೆ ಪ್ರಸಾರಸಂಖ್ಯೆ ಆಧರಿಸಿ ಜಾಹೀರಾತು ದರ ನಿಗದಿಪಡಿಸಿ ಪ್ರಾಯೋಜಕತ್ವದ ಮೊತ್ತವನ್ನು ಲೆಕ್ಕ ಹಾಕಬೇಕು.
4. ಪತ್ರಿಕೆಗಳು ಪ್ರಾಯೋಜಕತ್ವಕ್ಕೆ ಬದಲಾಗಿ ವಿಶೇಷ ಪುರವಣಿ : ವಿಶೇಷ ಸಂಚಿಕೆಗೆ ಜಾಹೀರಾತು ಬಿಡುಗಡೆ ಕೋರಿ ಮನವಿ ಸಲ್ಲಿಸಿದಲ್ಲಿ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಅಥವಾ ಸರ್ಕಾರದ ಪೂರ್ವಾನುಮತಿಯೊಂದಿಗೆ ಜಾಹೀರಾತು ಬಿಡುಗಡೆ ಮಾಡಲು ವಾರ್ತಾ ಇಲಾಖೆಯ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.

31) **ವಿಶೇಷ ಮಾಧ್ಯಮ ಪತ್ರಿಕೆಗಳು :**

ಕಲೆ, ಸಾಹಿತ್ಯ, ಕ್ರೀಡೆ, ಕೃಷಿ, ಸಂಸ್ಕೃತಿ, ಮಹಿಳೆ, ವಿಜ್ಞಾನ, ಕಾನೂನು ಹೀಗೆ ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಪತ್ರಿಕೆಯ ಒಟ್ಟು ಭಾಗದಲ್ಲಿ ಶೇಕಡಾ 70 ರಷ್ಟು ಭಾಗವನ್ನು ಮೀಸಲಿಟ್ಟ ಪತ್ರಿಕೆಗಳನ್ನು ವಿಶೇಷ ಮಾಧ್ಯಮಪಟ್ಟಿಗೆ ಸೇರಿಸಲು ವಾರ್ತಾ ಇಲಾಖೆಯ ನಿರ್ದೇಶಕರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಈ ಪತ್ರಿಕೆಗಳಿಗೆ ಪ್ರತಿ ತಿಂಗಳು ಸರ್ಕಾರದ ಪ್ರೋತ್ಸಾಹ ರೂಪದಲ್ಲಿ ವಾರ್ತಾ ಇಲಾಖೆಯ ನಿರ್ದೇಶಕರು ಪತ್ರಿಕೆಯ ಪ್ರಸಾರ ಸಂಖ್ಯೆ ಮತ್ತು ವಿಷಯ ವ್ಯಾಪ್ತಿಗಳಂತಹ ಅಂಶಗಳನ್ನು ಪರಿಗಣನೆಯಲ್ಲಿಟ್ಟುಕೊಂಡು ತಮ್ಮ ವಿವೇಚನಾನುಸಾರ ಸೂಕ್ತ ಜಾಹೀರಾತು ಗೊತ್ತುಪಡಿಸಿ ಒಂದು ಪುಟದ ಜಾಹೀರಾತು ಬಿಡುಗಡೆ ಮಾಡಲು ವಾರ್ತಾ ಇಲಾಖೆಯ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ. ಈ ಪತ್ರಿಕೆಗಳ ಜಾಹೀರಾತು ದರಗಳನ್ನು ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ದರ ಪರಿಷ್ಕರಣೆ ಮಾಡಿದಂತೆ ಪ್ರತಿ ಎರಡು ವರ್ಷಕ್ಕೊಮ್ಮೆ ಶೇ.12 ರಂತೆ ದರ ಪರಿಷ್ಕರಿಸಲು ವಾರ್ತಾ ಇಲಾಖೆಯ ನಿರ್ದೇಶಕರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಅರ್ಹತೆ:

1) ಡಿಕ್ಲರೇಷನ್ ಪ್ರತಿ. (ನಮೂನೆ-1 ರಲ್ಲಿ)
2) ಆರ್.ಎನ್.ಐ ಪ್ರಮಾಣಪತ್ರ.
3) ಪ್ರಸಾರ ಸಂಖ್ಯೆ ಕುರಿತು ಮಾಹಿತಿ.
4) 20/- ರೂಗಳ ಮೌಲ್ಯದ ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಮಾಡಿಕೊಂಡ ಪ್ರಮಾಣಪತ್ರದಲ್ಲಿ ಪತ್ರಿಕೆಯ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರ ವಿಳಾಸ, ಪತ್ರಿಕೆಯ ಅಳತೆ, ಭಾಷೆ, ಮುದ್ರಿತ ಪ್ರತಿಗಳ ಸಂಖ್ಯೆ, ಪ್ರಸಾರ ಸಂಖ್ಯೆ ನಮೂದಿಸಿ ವಾರ್ತಾ ಇಲಾಖೆಗೆ ಸಲ್ಲಿಸಬೇಕು.

32) **ನಿರಶನ ಮತ್ತು ಉಳಿಸುವಿಕೆಗಳು**

ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಈವರೆಗೆ ವಾರ್ತಾ ಇಲಾಖೆಯಲ್ಲಿ ವಾಣಿಜ್ಯ ಪ್ರಚಾರ ಶಾಖೆಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಎಲ್ಲಾ ಅಧಿಸೂಚನೆಗಳು/ಆದೇಶಗಳು ಮತ್ತು ಸುತ್ತೋಲೆಗಳು ನಿರಶನಗೊಂಡಿರುತ್ತವೆ. ಸದರಿ ಆದೇಶ ಅಥವಾ ನಿಯಮಗಳ ಉಪಬಂಧಗಳ ಅರ್ಥ ವಿವರಣೆಯ ವಿಷಯದಲ್ಲಿ ಅಗತ್ಯ ಸ್ಪಷ್ಟೀಕರಣವನ್ನು ಕಾಲಕಾಲಕ್ಕೆ ಸರ್ಕಾರ ಹೊರಡಿಸಬಹುದು.

ಸೂಚನೆ:

1. ಸರ್ಕಾರದ ವ್ಯಾಪ್ತಿಗೆ ಒಳಪಡುವ ವಿವಿಧ ಇಲಾಖೆಗಳು ನಿಗಮ, ಮಂಡಳಿ, ಪ್ರಾಧಿಕಾರ, ಜಿಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು, ನಗರ ಪಾಲಿಕೆಗಳು ಜಾಹೀರಾತು ಪ್ರಕಟಣಾ ವೆಚ್ಚಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ವಾರ್ತಾ ಇಲಾಖೆಯ ನಿರ್ದೇಶನಾಲಯದ ವಾಣಿಜ್ಯ ಪ್ರಚಾರ ಶಾಖೆಯ ಉಪನಿರ್ದೇಶಕರು ದೃಢೀಕರಣ ಮಾಡಿರುವುದನ್ನು ಖಚಿತಪಡಿಸಿಕೊಂಡ ನಂತರವೇ ಖಜಾನೆಗಳು ಅಂತಹ ಬಿಲ್ಲುಗಳನ್ನು ಪಾವತಿಗಾಗಿ ಮಾನ್ಯ ಮಾಡಬೇಕು.

10/9/14

(ಸಿ.ಮಂಜುಳ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ,
(ವಾರ್ತಾ ಶಾಖೆ)

ಈ ಪತ್ರಿಕೆಗಳಿಗೆ ಪ್ರತಿ ತಿಂಗಳು ಸರ್ಕಾರದ ಪ್ರೋತ್ಸಾಹ ರೂಪದಲ್ಲಿ ವಾರ್ತಾ ಇಲಾಖೆಯ ನಿರ್ದೇಶಕರು ಪತ್ರಿಕೆಯ ಪ್ರಸಾರ ಸಂಖ್ಯೆ ಮತ್ತು ವಿಷಯ ವ್ಯಾಪ್ತಿಗಳಂತಹ ಅಂಶಗಳನ್ನು ಪರಿಗಣನೆಯಲ್ಲಿಟ್ಟುಕೊಂಡು ತಮ್ಮ ವಿವೇಚನಾನುಸಾರ ಸೂಕ್ತ ಜಾಹೀರಾತು ಗೊತ್ತುಪಡಿಸಿ ಒಂದು ಪುಟದ ಜಾಹೀರಾತು ಬಿಡುಗಡೆ ಮಾಡಲು ವಾರ್ತಾ ಇಲಾಖೆಯ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ. ಈ ಪತ್ರಿಕೆಗಳ ಜಾಹೀರಾತು ದರಗಳನ್ನು ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ದರ ಪರಿಷ್ಕರಣೆ ಮಾಡಿದಂತೆ ಪ್ರತಿ ಎರಡು ವರ್ಷಕ್ಕೊಮ್ಮೆ ಶೇ.12 ರಂತೆ ದರ ಪರಿಷ್ಕರಿಸಲು ವಾರ್ತಾ ಇಲಾಖೆಯ ನಿರ್ದೇಶಕರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಅರ್ಹತೆ:

1) ಡಿಕ್ಲರೇಷನ್ ಪ್ರತಿ. (ನಮೂನೆ-1 ರಲ್ಲಿ)
2) ಆರ್.ಎನ್.ಐ ಪ್ರಮಾಣಪತ್ರ.
3) ಪ್ರಸಾರ ಸಂಖ್ಯೆ ಕುರಿತು ಮಾಹಿತಿ.
4) 20/- ರೂಗಳ ಮೌಲ್ಯದ ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಮಾಡಿಕೊಂಡ ಪ್ರಮಾಣಪತ್ರದಲ್ಲಿ ಪತ್ರಿಕೆಯ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರ ವಿಳಾಸ, ಪತ್ರಿಕೆಯ ಅಳತೆ, ಭಾಷೆ, ಮುದ್ರಿತ ಪ್ರತಿಗಳ ಸಂಖ್ಯೆ, ಪ್ರಸಾರ ಸಂಖ್ಯೆ ನಮೂದಿಸಿ ವಾರ್ತಾ ಇಲಾಖೆಗೆ ಸಲ್ಲಿಸಬೇಕು.

32) ನಿರಶನ ಮತ್ತು ಉಳಿಸುವಿಕೆಗಳು

ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಈವರೆಗೆ ವಾರ್ತಾ ಇಲಾಖೆಯಲ್ಲಿ ವಾಣಿಜ್ಯ ಪ್ರಚಾರ ಶಾಖೆಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಎಲ್ಲಾ ಅಧಿಸೂಚನೆಗಳು/ಆದೇಶಗಳು ಮತ್ತು ಸುತ್ತೋಲೆಗಳು ನಿರಶನಗೊಂಡಿರುತ್ತವೆ. ಸದರಿ ಆದೇಶ ಅಥವಾ ನಿಯಮಗಳ ಉಪಬಂಧಗಳ ಅರ್ಥ ವಿವರಣೆಯ ವಿಷಯದಲ್ಲಿ ಅಗತ್ಯ ಸ್ಪಷ್ಟೀಕರಣವನ್ನು ಕಾಲಕಾಲಕ್ಕೆ ಸರ್ಕಾರ ಹೊರಡಿಸಬಹುದು.

ಸೂಚನೆ:

1. ಸರ್ಕಾರದ ವ್ಯಾಪ್ತಿಗೆ ಒಳಪಡುವ ವಿವಿಧ ಇಲಾಖೆಗಳು ನಿಗಮ, ಮಂಡಳಿ, ಪ್ರಾಧಿಕಾರ, ಜಿಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು, ನಗರ ಪಾಲಿಕೆಗಳು ಜಾಹೀರಾತು ಪ್ರಕಟಣಾ ವೆಚ್ಚಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ವಾರ್ತಾ ಇಲಾಖೆಯ ನಿರ್ದೇಶನಾಲಯದ ವಾಣಿಜ್ಯ ಪ್ರಚಾರ ಶಾಖೆಯ ಉಪನಿರ್ದೇಶಕರು ದೃಢೀಕರಣ ಮಾಡಿರುವುದನ್ನು ಖಚಿತಪಡಿಸಿಕೊಂಡ ನಂತರವೇ ಖಜಾನೆಗಳು ಅಂತಹ ಬಿಲ್ಲುಗಳನ್ನು ಪಾವತಿಗಾಗಿ ಮಾನ್ಯ ಮಾಡಬೇಕು.

10/9/14

(ಸಿ.ಮಂಜುಳ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ,
(ವಾರ್ತಾ ಶಾಖೆ)

ಕರ್ನಾಟಕ ಸರ್ಕಾರ

ಸಂಖ್ಯೆ:ಕಸಂವಾ:31:ವಾಪ್ರಜಾ:2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:25-11-2015

ತಿದ್ದುಪಡಿ

ಜಾಹೀರಾತು ನೀತಿ-2013ಕ್ಕೆ ಜಾರಿಗೆ ತಂದಿರುವ ನಿಯಮಗಳ ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 69 ವಾಪ್ರಜಾ 2013, ದಿ:10.09.2014ಕ್ಕೆ ದಿ.8.5.2015ರಂದು ತರಲಾಗಿದ್ದ ತಿದ್ದುಪಡಿ ಆದೇಶದ ಕಂಡಿಕೆ 2ಕ್ಕೆ ಈ ಕೆಳಗಿನಂತೆ ತಿದ್ದುಪಡಿ ತರಲಾಗಿದೆ;

ದಿನಾಂಕ 8-5-2015ರ ತಿದ್ದುಪಡಿ ಆದೇಶದಲ್ಲಿರುವ ಕಂಡಿಕೆ-2ರಲ್ಲಿ ಪ್ರಸ್ತುತ ಇರುವ ಅಂಶಗಳು	ತಿದ್ದಿ ಓದಿಕೊಳ್ಳಬೇಕಾದ ಅಂಶಗಳು
ಪ್ರಸ್ತಾವನೆ ಭಾಗದಲ್ಲಿನ ......ಸರ್ಕಾರದ ಅಧೀನದಲ್ಲಿ ಬರುವ ನಿಗಮ, ಮಂಡಳಿ, ಪ್ರಾಧಿಕಾರ, ಸ್ಥಳೀಯ ಸಂಸ್ಥೆಗಳು (ಪಂಚಾಯತ್‌ರಾಜ್ ಸಂಸ್ಥೆಗಳು, ನಗರಸಭೆ, ಪುರಸಭೆ, ಮಹಾನಗರ ಪಾಲಿಕೆ) ತಮಗೆ ಸಂಬಂಧಿಸಿದ ಆಕರ್ಷಕ ಮತ್ತು ಟೆಂಡರ್ ಜಾಹೀರಾತುಗಳ ಬಿಡುಗಡೆ ಪ್ರಕ್ರಿಯೆಯನ್ನು ಆಯಾ ಸಂಸ್ಥೆಗಳೇ ನಿರ್ವಹಿಸಿಕೊಳ್ಳುವುದು ಹಾಗೂ ಈ ಸಂಸ್ಥೆಗಳು ಎಲ್ಲಾ ಜಾಹೀರಾತುಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಾನ್ಯತೆ ಪಡೆದ ಅಂಗೀಕೃತ ಜಾಹೀರಾತು ಸಂಸ್ಥೆಗಳಿಂದ ಮಾತ್ರ, ಇಲಾಖೆಯು ನಿಗದಿಪಡಿಸಿರುವ ಜಾಹೀರಾತು ದರದಲ್ಲಿ ಬಿಡುಗಡೆ ಮಾಡುವುದಕ್ಕೆ ಕ್ರಮ ಕೈಗೊಳ್ಳುವುದು.	ಸರ್ಕಾರದ ಆದೇಶ ಸಂ:ಕಸಂವಾಪ್ರ 69 ವಾಪ್ರಜಾ 2013 ದಿ.10-9-2014ರಲ್ಲಿ ಇರುವಂತೆ "....ಸರ್ಕಾರದ ವ್ಯಾಪ್ತಿಗೆ ಒಳಪಡುವ ಎಲ್ಲಾ ಇಲಾಖೆಗಳು, ಪಂಚಾಯತ್‌ರಾಜ್ ಸಂಸ್ಥೆಗಳು, ನಗರ ಪಾಲಿಕೆಗಳು, ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರ, ನಿಗಮ, ಮಂಡಳಿಗಳಿಗೆ ಸಂಬಂಧಿಸಿದ ಜಾಹೀರಾತುಗಳನ್ನು ಕಡ್ಡಾಯವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮುಖಾಂತರವೇ ಈ ಕೆಳಕಂಡಂತೆ ರೂಪಿಸಿರುವ ನಿಯಮಗಳನ್ವಯ ಬಿಡುಗಡೆ ಮಾಡತಕ್ಕದ್ದು".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

25/11/15

(ಸಿ.ಮಂಜುಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ
(ವಾರ್ತಾ ಶಾಖೆ)

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
30 NOV 2015
ನೋಂದಣಿ ಸಂಖ್ಯೆ 13833

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು

ರವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ), ಬೆಂಗಳೂರು.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು.
3. ನಿವಾಸಿ ಆಯುಕ್ತರು, ಕರ್ನಾಟಕ ಭವನ ನವದೆಹಲಿ.
4. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ (ವಾರ್ತಾ ನಿರ್ದೇಶಕರ ಮುಖಾಂತರ).
5. ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
6. ರಾಜ್ಯದ ಎಲ್ಲಾ ಪತ್ರಿಕೆಗಳ/ಮಾಧ್ಯಮಗಳ ಸಂಸ್ಥೆಗಳ ಪ್ರತಿನಿಧಿಗಳಿಗೆ (ವಾರ್ತಾ ನಿರ್ದೇಶಕರ ಮುಖಾಂತರ).
7. ಮಾನ್ಯ ಮುಖ್ಯಮಂತ್ರಿಗಳ/ಎಲ್ಲಾ ಮಾನ್ಯ ಸಂಪುಟ ದರ್ಜೆ/ಮಾನ್ಯ ರಾಜ್ಯ ಸಚಿವರುಗಳ ಆಪ್ತ ಕಾರ್ಯದರ್ಶಿಗಳು.
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ ವ್ಯವಹಾರಗಳು).
9. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ/ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಯವರ/ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಸಂವಾ ಇಲಾಖೆ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಕಸಂವಾ (ಸಮನ್ವಯ), ಬೆಂಗಳೂರು.
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

26 NOV 2015

6.ದ್ವೈ ಮಾಸಿಕ ಪತ್ರಿಕೆಗಳಿಗೆ ಪ್ರತಿ ತಿಂಗಳು ಕನಿಷ್ಠ 1 ಪುಟ ಜಾಹೀರಾತು.	
7.ತ್ರೈ ಮಾಸಿಕ ಪತ್ರಿಕೆಗಳಿಗೆ ಪ್ರತಿ ತಿಂಗಳು ಕನಿಷ್ಠ 1 ಪುಟ ಜಾಹೀರಾತು.	

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
15/9/15
(ಸಿ.ಮಂಜುಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ
(ವಾರ್ತಾ ಶಾಖೆ)
15/9/15

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು

ರವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ), ಬೆಂಗಳೂರು.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು.
3. ನಿವಾಸಿ ಆಯುಕ್ತರು, ಕರ್ನಾಟಕ ಭವನ ನವದೆಹಲಿ.
4. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ (ವಾರ್ತಾ ನಿರ್ದೇಶಕರ ಮುಖಾಂತರ).
5. ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
6. ರಾಜ್ಯದ ಎಲ್ಲಾ ಪತ್ರಿಕೆಗಳ/ಮಾಧ್ಯಮಗಳ ಸಂಸ್ಥೆಗಳ ಪ್ರತಿನಿಧಿಗಳಿಗೆ (ವಾರ್ತಾ ನಿರ್ದೇಶಕರ ಮುಖಾಂತರ).
7. ಮಾನ್ಯ ಮುಖ್ಯಮಂತ್ರಿಗಳ/ಎಲ್ಲಾ ಮಾನ್ಯ ಸಂಪುಟ ದರ್ಜೆ/ಮಾನ್ಯ ರಾಜ್ಯ ಸಚಿವರುಗಳ ಆಪ್ತ ಕಾರ್ಯದರ್ಶಿಗಳು.
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ ವ್ಯವಹಾರಗಳು).
9. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ/ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ/ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಸಂವಾ ಇಲಾಖೆ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಕಸಂವಾ (ಸಮನ್ವಯ) ಬೆಂಗಳೂರು.
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.